ಹದಿನೇಳನೇ ಸಂಧಿ ಮುಗಿದುದು.

—(ಹದಿನೇಳನೆಯ ಸಂಧಿ ಪ್ರಾರಂಭವು.)—

ಸೂಚನೆ॥ ಕುಠಾರ=ಕೊಡಲಿ, ಸಿಂಧುರ=ಆನೆ, ವಸನ=ವಸ್ತ್ರ, ದ ಹನ=ಅಗ್ನಿ, ಮಾಂಗಲ್ಯ=ಶುಭ ॥೧॥ ಇಂದುರಿಪುಬಂಧು=ಚಂದ್ರನ್ವೈರಿಯಾ ದ ರಾಹುವಿಗೆ ನೆಂಟನೆಂದರೆವಿಷ, ಕಂಧರ=ಕೊರಳು, ಶತಧರ್ಮ=ಇಂದ್ರ, ೨॥ ಕರಿಣೀಕ=ಶಾನುಭಾಗ ॥೩॥ ಆರು=ಯಾರು ಮನಮಂದಿರ=ಮನೋ ಮಂದಿರ, ನಮ್ಶಿವ=ನಮಃಶಿವಾಯ ॥೪॥ ಪಿಸುಣರು=ಭಾಡಿಕಾರರು ॥೫॥ ಮುಗುಳ್=ಮತ್ತೆ ॥೬॥ ಗೋಚರ=ತಿಳಿಯಿಸುವುದು, ವಿರೋಚನ=ಸೂರ್ಯ ೭॥ ಜಪ್ತಿಗೆ=ಪರೀಕ್ಷೆಗೆ ॥೮॥ ಗಣಿತದ=ಲೆಕ್ಕದ, ॥ ೯ ॥ ಕೃತಕ=ಕಲ್ಪಿತ, ೧೦ ॥ ಗಡಣ=ಗುಂಪು, ಆಲಯ=ಮನೆ ॥ ೧೧ ॥ ಓಪ=ಒಡೆಯ, ಕಲಾ= ಭೂಷಣ, ಲೋಲ=ಆಸಕ್ತ, ಸಿಂಧು=ಕಡಲು, ಕಂದ=ಗೆಡ್ಡೆ ॥ ೧೨॥

—(ಕಥಾಸಂಗ್ರಹ ವಚನವು.)—

ಕಲ್ಯಾಣಪುರದ ಬಿಜ್ಜಳರಾಯನ ಸಂಸ್ಥಾನದ ಮುಖ್ಯಕರಣೀಕ ಬಾ ಚರಸನೆಂಬಾತನು ಪಂಚಾಕ್ಷರ ಮಂತ್ರಸಿದ್ಧಿಯಿಂದ ಮನವು ತನ್ನಾಯವಾಗೆ ಆನಮನೆಯ ಲೆಕ್ಕವೆಲ್ಲವಂ ನಮಃಶಿವಾಯ ಎಂದು ಬರಯಿದಲು, ರಾಯನದಂ

ಕೇಳಿ ದಂಡನಾಥ ಬಸವಣ್ಣನವರಿಗೆ ಪೇಳಿ ಸೂರ್ಯಾಸ್ತಮಾನದೊಳಗಾಗಿ ಲೆಕ್ಕವಂತೆಂಪಿರಿಸಲಾಗಿ ನೋಡುವವೇಳಗೆ ಸಲುಯಾಗಿತ್ತು ಆ ವಿಮರ್ಶಗೆ ೬೦ ಘಳಿಗೆ ಪೊತ್ತು ಹಿಡಿಯಿತು, ಅದುವರೆಗೂ ಸೂರ್ಯಾಸ್ತಮಾನವಾಗದೆ ಮಧ್ಯಾಹ್ನವಾಗಿಯೇ ಇತ್ತು, ಇದೆಲ್ಲವೂ ಬಾಚರಸರ ಮಂತ್ರಮಹಿಮೆಯೆಂದು ತಿಳಿದು ಅವರಂ ಸತ್ಕರಿಸಿ ಕಳುಹಲಾಗಿ ಅವರ ಅಪ್ಪಣೆಯಿಂದ ಸೂರ್ಯನು ಅಸ್ತಮಾನವಾದನು, ಪಂಚಾಕ್ಷರಮಂತ್ರ ಮಹಿಮೆ ಹೀಗಿರುತ್ತೆ.

ಅರ್ಥ=ಪ್ರಯೋಜನ ॥೧೪॥ ಗೊತ್ತು=ಮೂಲಸ್ಥಾನ ॥೧೫॥ ಸಾ=ಕಾಯಿ ॥೧೬॥ ಕುಂತಳ=ಕುರುಳು ॥೧೭॥ ಜಾಲಿಸಿ=ವಂಚಿಸಿ, ॥೧೯॥ ಓರಿಗೆ=ಜೊತೆ ॥೨೦॥ ಪಥ=ದಾರಿ, ಗೊಡವೆ=ಗೋಜು, ಶವ=ಹೆಣ ॥ ೨೧ ॥ ಕಾಷ್ಠ=ಕಟ್ಟಿಗೆ ॥೨೨॥ ದರ್ಪ=ಗರ್ವ ॥೨೩॥ ತೆರನು=ರೀತಿ ॥೨೪॥ ಕಾವ ಕಾಮ ॥೨೫॥ ಬಳಗ=ಪರಿವಾರ ॥೨೬॥ ಗುಗ್ಗುಳ=ರಾಳ ॥೨೭॥ ಕಂಬಿ=ಕಾವಡಿ, ಮಲಯಜಾಚಲ=ಚಂದನಾದ್ರಿ, ಮಲಯಜ=ಶ್ರೀಗಂಧ, ಮಲಹರ-ಶಿವ ॥೨೮॥ ಗೌಡ=ಗೌಳ, ಸೊಪ್ಪು=ಬಿಲ್ವ, ಸೊಗಡು=ಪರಿಮಳ, ಸದನ ಮನೆ ॥೨೯॥ ಒಡಲಿಗೆ=ಹೊಟ್ಟೆಗೆ, ಬೆಳಗಿದ=ಬೆಳಕಾದ, ಅಣುಮಾತ್ರ=ಕೊಂಚವಾದರೂ ॥೩೦॥ ನಿರ್ಮಾಲ್ಯ=ಪೂಜಾವಿನಿಯುಕ್ತ, ದಸಿ=ಮೋಟು ಮುಳ್ಳು ॥೩೧॥ ಶಬರ=ಕಿರಾತ ॥೩೨॥ ಹೊಲಬ=ಕೆಲವನ್ನು, ಪಲವು-ಬಹು, ೩೪ ॥ ಗಾಳಕತಪಸಿಗಳು=ಗೌಳಕತಾಪಸರು ॥೩೫॥ ವನ=ನೀರು ಅಂಕುರ ಮೊಳಕೆ, ಮುನಿ=ನಾರದ ಶುಕ ವಾಮದೇವ ದಧೀಚ್ಯುಪಮನ್ಯು ದೂರ್ವಾಸಾಗಸ್ತ್ಯ ಪ್ರಮುಖರು ॥೩೬॥ ತರಳಾಕ್ಷಿ=ಚಪಲನೇತ್ರೆಯೇ ॥೩೭॥ ಉನ್ನತವ=ಆಧಿಕ್ಯವನ್ನು, ಸಮನಿಸ=ಸಮನಾಗೇಣಿಸು ॥೩೮॥ ಉಪವಾಸಿ=ಹಸಿದಿರುವನು, [ದೂರ್ವಾಸಮುನಿ] ನದಿ=ಗಂಗೆ, ಬ್ರಹ್ಮಚಾರಿ=ಜಿತೇಂದ್ರಿಯನು [ಶ್ರೀಕೃಷ್ಣನು] ಸತಿ=ರುಕ್ಮಿಣಿ [ಈಕಥೆಯು ಗೋಪಾಲತಾಪನಿಯೆಂಬ ಉಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ] ॥ ೩೯ ॥ ಮೊಸಲ=ಶುದ್ಧಸೋಪಸ್ಕರ, ಎಡೆ=ಪಕ್ವಾನ್ನ ಬಡಿಸಿದ ಪಾತ್ರ, ತೆರಪು=ನೀರಿಲ್ಲದ ದಾರಿ ॥೪೦॥ ಅರುಹು ತಿಳುವಳಿಕೆ ॥೪೧॥ ದೃಷ್ಟ=ಪ್ರಾತ್ಯಕ್ಷಿಕ ಮಹಿಮೆ, ಪುಂಡರೀಕ=ಭೋಗಿ ನಿಃಪಾಯಸುಖಾನುಭವಿ ॥೪೨॥ ಸಡೆ=ಅನುಷ್ಠಾನ, ಇರವು=ಇಷ್ಟ, ಜರಿವುದು=ನಿಂದಿಸು ॥೪೩॥ ಡಂಗು=ಟಮುಕು ಸಾವಧಾನ=ಚಿತ್ತೈಕಾಗ್ರ್ಯ ದೊಡವೆ ॥ ೪೪ ॥ ಭಾಷೆ=ಪ್ರತಿಜ್ಞೆ, ಶ್ರುತ=ಪ್ರಸಿದ್ಧ, ಪುರ=ನಗರದಲ್ಲಿದ್ದವರೆಲ್ಲರೂ, ಪ್ರಮದೆ=ಹೆಂಗಸು, ನಿಜಪದ=ಕೈಲಾಸ ॥ ॥೪೫॥

—(ಕಥಾಸಂಗ್ರಹ ವಚನ.)—

ಗೂರ್ಜರದೇಶವನ್ನಾಳುವ ಉದ್ಭಟರಾಯನು ಪಾಲಗುಜ್ಜರವೆಂಬುದೆಸ

ತಳೆದು ಮಂಗಳಾಂಬಿಕೆಯೆಂಬ ಪತ್ನಿಯೊಡನೆ ಶಿವಶರಣನಾಗಿ ಪಂಚಾಕ್ಷರ
ಮಂತ್ರವಂ ಜಪಿಸುತ್ತ ಶಿವಯೋಗಸಿದ್ಧನಾಗ ಲೀಲೆಯಿಂದ ರಾಜ್ಯವಾಳುತ್ತಿರ
ಲೊಂದುದಿನ ಪೆಂಡಿರೊಡನೆ ಪಗಡೆಯಾಡುವಾಗ ಅಪರೋಕ್ಷಜ್ಞಾನದಿಂ
ದೊಂದಾಶ್ಚರ್ಯವನರಿದು ನಗಲಾಗಿ ನಕ್ಕುದಕೆ ಕಾರಣವೇನೆಂದು ಕೇಳಿದರಾ
ಣಿಗೆ ಪೇಳಿದಕಥೆಯೆಂತೆನೆ ॥ ಸೌರಾಷ್ಟ್ರದೇಶದಲ್ಲಿ ವಿಲಾಸವತಿಯೆಂಬ ನಗ
ರದೊಡೆಯನಾದ ನಿಕುಂಭರಾಯನು ಮೃಡನಂಬೇಡಿ ಮಗನಂ ಪಡದುವಹಿ
ಲಯ್ಯನೆಂದು ಪೆಸರಿಟ್ಟನು. ಆವಹಿಲಯ್ಯನು ಗೆಳೆಯರೊಂದಿಗೆ ಊರಬಾಕ
ಲಿನ ಬಳಿಯೊಳು ನೆತ್ತವಾಡುತಿರಲು ನಿಕುಂಭರಾಯನು ಸಾಯಲಾಗಿ ದೂತ
ರುಬಂದು ನಿಮ್ಮಪ್ಪ ಸತ್ತನು ಬರಹೇಳಿ ಕರದರೆ ಆಟದ ರುಚಿಯಿಂದವನುಸತ್ತ
ವರನ್ನು ಪುದೇದಾರಿಯಲ್ಲಿ ತರುವರೆಂದುಸುರಿ ಆಡುತ್ತಿರಲು ಇವನಕ್ಷವ್ಯಸನಿ
ಯಾದ ಮೂಢನೆಂದು ಬಿಟ್ಟವರುಪೋಗಿ ಮಂತ್ರಿಗರುಹಲ್ಕೆ ಅವರೆಲ್ಲಸೇರಿ
ರಾಯನಪೆಣವಂ ಸುಡುಗಾಡಿಗೆ ಕೊಂಡುಪೋಗಲು, ವಹಿಲಂಣನುಂ ಪೋಗಿ
ಚಿತಗೆ ಅಗ್ನಿಯಂಕೊಡಲು ಜನರು ಹಿಂತಿರುಗಿ ಬರುತಿರೆನನ್ನತಂದೆ ಯೇಕೆಬ
ರಲಿಲ್ಲವೆಂದವನು। ಕೇಳಲಾಗಿ ಸತ್ತವರು ಬರುವದುಂಟೇ ನೀನೂಸತ್ತರೆ ಹೀ
ಗೆಯೇ ಸುಡಲ್ಪಡುವಿಯೆಂದು ಜನವಾಡೆವಹಿಲಂಣನು ಮರಣವಂತಪ್ಪಿಸುವರಾ
ರೆಂದು ಕೇಳಲಾಗಿ ಮೃತ್ಯುಂಜಯನೆಂದು ಸುರೆ ಎಲ್ಲಿರ್ಪನೆಂದು ಕೇಳುತಲೂ
ಸೌರಾಷ್ಟ್ರದೇಶದೊಳು ಸೋಮನಾಥ ಲಿಂಗವಾಗಿರ್ಪ ನೆಂದೋರ್ವ ಭಕ್ತ
ನು ಪೇಳಲಾಗಿ ವಹಿಲಯ್ಯನು ಅದೇಮಾತನ್ನು ಉಪದೇಶವಾಗಿ ಗ್ರಹಿಸಿ ಅಲ್ಲಿ
ಗೆಪೋಗಿ ಗೌಡತಾಪಸರ ವಿಘ್ನಂಗಳಂ ಸೈರಿಸಿ ಪ್ರತಿದಿನವೂ ಮಲಯಾಚಲ
ದಿಂದ ತಂದಗುಗ್ಗುಲವಂ ಧೂಪವಿತ್ತು ಆರಾಧಿಸುತ್ತಾ ೧೨ ವರುಷಕಳದಬಳಿ
ಕಬೆಟ್ಟದಿಂದ ಮೈಸಾಕ್ಷಿಗುಗ್ಗುಲ ಶ್ರೀಗಂಧ ಚಕ್ಕೆಬಿಲ್ವಪತ್ರಗಳಂ ಮೀಸಲು
ಕಾವಡಿಕಟ್ಟಿ ನೆಲದಮೇಲಿರಿಸದೆ ತರುವೆನೆಂಬ ವ್ರತದಿಂದ ಬರುತ್ತಿರಲು ಕಾ
ಲಿನೊಳು ದಸಿಹೊಕ್ಕು, ನಡೆಯಲಾರದೆ ಉಂಗುಟದಿಂದ ನಡೆದುಬರವಾಗ ಶಿವ
ನು ಕಿರಾತರೂಪದಿಂದ ಬಂದುದೆಸಿಯಂ ಕಿತ್ತುಪೋದಮೇಲೆ ತಂದಕಾವಡಿ
ಯಂ ಸೋಮನಾಥಂಗೆ ಸಮರ್ಪಿಸುವಷ್ಟರಲ್ಲಿ ಗೌಡತಾಪಸರು ಗುಗ್ಗುಲವಂ
ಅಪಹರಿಸಲಾಗಿ ತನ್ನದೇಹವನ್ನೇ ಸುಟ್ಟು ಶಿವನಿಗೆ ಧೂಪಸೇವೆ ಗೈವೆನೆಂದು
ಬೆಂಕಿಯ ಕೊಂಡದೊಳ್ಬಿದ್ದು ಉರಿಯುತ್ತಿರುವಾಗ ಹರನುಮೆಚ್ಚಿ, ವಹಿಲ
ಯ್ಯನಂ ಕೈಲಾಸಕ್ಕೆ ವೈಯ್ಯುತ್ತಿವನು ಇಷ್ಟು ಸಾಹಸವೆಸಗಿ ತಾನೋರ್ವನೆ
ಕೈಲಾಸಕ್ಕೆಪೋದನೆಂದು ನಕ್ಕೆನೆಂಬದಾಗಿ ಪಾಲಗುರ್ಜರನು ರಾಣಿಯೊಡನೆ
ಪೇಳಿದನು, ಆಕೆಯು ನಿದರ್ಶನವೇನೆಂದುಕೇಳಲಾಗಿ ಇದುಗೋ ಕೈಲಾಸಕ್ಕೆ
ಪೋಗುತ್ತಿರುವ ವಿಮಾನವಂ ನೋಡೆಂದು ಆಕಾಶದಲ್ಲಿ ತೋರಿಸಲಾಗಿಕಂಡು

ಮೆಚ್ಚಿ ಆದರೆ ಅಂತಪ್ಪ ಶಿವಯೋಗಿಯುನ್ನು ನೋಡಿ ಭೋಗಿಯಾದ ನೀನು ನಗಬಹುದೇ ಎಂದು ಕೇಳಿದ ಮಂಗಳಾಂಬೆಗೆ ರಾಯುಂಪೇಳ್ವ ಕಥೆಯುಂತೆನೆ ಯಮುನಾತೀರದಲ್ಲಿ ಕೃಷ್ಣನು ರುಕ್ಮಿಣಿಯೊಡನೆ ಭೋಗಿಸುತ್ತ ತಪಸ್ವಿಯಾಗಿ ನಿತ್ಯ ಬ್ರಹ್ಮಚಾರಿಯೆಂದೆನ್ನಿಸಿ ಕೊಂಡಿರಲು ರುಕ್ಮಿಣಿಯು ನೀನು ಬ್ರಹ್ಮಚಾರಿಯೆಂತೆಂದು ಕೇಳಲಾಗಿ ತೋರಿಸುವನಾದೊಡೆ, ನೀನು ಅನ್ನವಂಕೊಂಡುಪೋಗಿ ಗಂಗಾತೀರದಲ್ಲಿರುವ ನಿತ್ಯೋಪವಾಸಿಯಾದ ದೂರ್ವಾಸಮುನಿಗೆ ಉಣಿಸಿಬಾ! ದಾರಿಯಲ್ಲಿ ನನ್ನ ಹೆಸರುಹೇಳಿದರೆ ನದಿಯು ತೆರಪುಕೊಡುವುದು ಎನ್ನುತಲೂ, ಆಕೆಯು ಹಾಗೆಯೇ ಮಾಡಿ ನಿದರ್ಶನ ಕಂಡು ದೂರ್ವಾಸಂಗೆ ಉಣಿಸಿದ ಬಳಿಕ ನೀನುವುಂಡು ನಿತ್ಯೋಪವಾಸಿಯೆಂತೆನೆ ನನ್ನ ಪೆಸರಂ ಪೇಳಲ್ಕೆ ನದಿಯು ದಾರಿಕೊಡುವುದೆಂದಾತನು ಪೇಳಲಾಗಿ ಹಾಗೆಯೇ ಮಾಡಿ ತಾರ್ಕಣ್ಯಗೊಂಡು ರುಕ್ಮಿಣಿಯು ಭೋಗಿಯಾದ ಕೃಷ್ಣನಂ ನಿತ್ಯಬ್ರಹ್ಮಚಾರಿಯೆಂತಲೂ ನಿತ್ಯಭೋಗಿಯಾದ ದೂರ್ವಾಸನಂ ನಿತ್ಯೋಪವಾಸಿಯೆಂತಲೂ ನಿಶ್ಚಯಿಸಿಕೊಂಡಳು. ಶಿವಯೋಗಿಗಳ ಬಗೆಯು ಈಪರಿಯಾಗಿರುವುದರಿಂದ ನನ್ನ ರೀತಿಯನ್ನರಿಯದೆ ಶಂಕಿಸಬೇಡವೆಂದು ರಾಯಂ ಪೇಳಲಾಗಿ, ಆದರೆ ನೀನೆಂದು ಕೈಲಾಸಕ್ಕೆ ಪೋಗುವಿಯೆನ್ನುತಲೂ ಈ ನಗರದ ಸರ್ವಜನರೊಂದಿಗೆ ನಿನ್ನಂ ಸೋಮವಾರದಲ್ಲಿ ಕೈಲಾಸಕ್ಕೆ ಕೊಂಡೊಯ್ವೆನೆಂದುಪೇಳಿ ಪಾಲಗುರ್ಜರನು ಅದೇದಿನ ಹಾಗೆಯೇ ಕೈಲಾಸಕ್ಕೆ ಪೋದನು. ಇದು ಶಿವಪಂಚಾಕ್ಷರೀ ಜಪಪ್ರಭಾವವೆಂದು ಜಕ್ಕಣಾಚಾರ್ಯನು ಪ್ರಭುಢರಾಯುಂಗೆ ಪೇಳಿದ ಪುರಾಣಕಥೆಯು. ... ... *

ಪಿತೃಪತಿ=ಯಮ, ನಗರ=ಸಂಯಮಿನಿ, ನರಳುವ=ವೇದನೆಗೊಂಬ, ಎಂದು=ಯಾವಾಗಲೂ, ಶಿವಮಂತ್ರ=ಪಂಚಾಕ್ಷರೀ, ಮೋಕ್ಷ=ಶಿವಲೋಕ ‖ ... ... ‖೪೭‖

—(ಕಥಾಸಂಗ್ರಹ ವಚನವು.)—

ಶಿವಾಜ್ಞೆಯಿಂದ ಸಾನಂದಗಣೇಶನೆಂಬ ಶಿವಯೋಗಿಯು ಯಮಲೋಕಕ್ಕೆಪೋಗಿ ಯಮನಿಂದ ಸತ್ಕೃತನಾಗಿ ನರಕಗಳಂನೋಡಿ ಯಾತನೆಗೊಂಬ ನಾರಕಿಗಳಲ್ಲಿ ಕರುಣಿಸಿ ಶಿವಪಂಚಾಕ್ಷರ ಮಂತ್ರಶ್ರವಣ ಗೊಳಿಸಲು, ಆ ಪ್ರಾಣಿಗಳೆಲ್ಲರೂ ಜಪಿಸಿ ಆಗಲೇ ನರಕದಿಂದ ಮುಕ್ತರಾಗಿ ಕೈಲಾಸಕ್ಕೆಪೋದರೆಂಬುವುದು ಶಿವಮಂತ್ರ ಮಹಿಮೆಯಾಗಿದೆ. ... *

ಸೊನ್ನಲಾಪುರ, ಸೊನ್ನಲಿಗೆ, ಸುವರ್ಣವಲ್ಲೀಪುರ, ಸ್ವರ್ಣವಲ್ಲಪುರ ಸೋಲಾಪುರ ಇಂತೈದುಪೆಸರ್ಗಳಿಂ ಪ್ರಖ್ಯಾತವಾದುದು ಈಗಲದರಂ ಸೋಲಾಪುರಯೆನ್ನುವರು. ಚನ್ನಮಲ್ಲೇಶ್ವರ=ಮಲ್ಲಿಕಾರ್ಜುನ, ಸೊಡರು=ದೀವಿಗೆ

೪೮ || ಶುನಕ = ನಾಯಿ, ಶರಿರ = ಶರೀರ ||೪೯|| ಕುನ್ನಿ = ಕುಕುರ ||೫೦|| ಧಿಲ್ಲೇಶ = ಬೇಡರೊಡೆಯ ||೫೧|| ಉತ್ತಮರ್ಣ = ಸಾಲಕೊಟ್ಟವನು || ೫೨ || ಧೂರ್ತ = ವಂಚಕ ||೫೩|| ಕುಕ್ಕುರ = ನಾಯಿ, ಪುಳು = ಹುಳು || ೫೪ || ಲಾಕುಳಿಕೋಲ = ಯೋಗದಂಡವನ್ನು || ... ... ||೫೫||

—(ಕಥಾಸಂಗ್ರಹ ವಚನವು.)—

ಸೊನ್ನಲಾಪುರದ ಸಿದ್ಧರಾಮೇಶ್ವರನು ಚನ್ನಮಲ್ಲೇಶನ ಗುಡಿಯಲ್ಲಿರುವಾಗ ಕರಿನಾಯಿಯೊಂದು ಬಂದು ದೀಪದೆಣ್ಣೆಯಂ ಕುಡಿದು ಆತನಕಾಲು ಮೇಲೆ ಬಿದ್ದುಸಾಯಲಾಗಿ ಅದರ ದೇಹದಿಂದ ಗಂಧರ್ವನೋರ್ವನು ಹೊರಹೊಂಟು ಹೇಳಿದನು. ಮುನ್ನ ಶಿವಲೋಕದಲ್ಲಿ ಭಾಗವತನೆಂಬನಾನು ಶಿವಂಗೆ ಸಾಷ್ಟಾಂಗನೆರಗುವಾಗ ನನ್ನ ಕಾಲು ಉಗ್ರಮುಖ ಗಣಪತಿಗೆ ಸೋಂಕಲಾಗಿ ನಾಯಿಯಾಗೆಂದು ಶಪಿಸಲ್ಪಟ್ಟೆನು, ನಿನ್ನಡಿಯಂ ಸೋಂಕೆ ನಿಶ್ಶಾಪವೆಂದು ಕರುಣಿಸಲ್ಪಟ್ಟುದುದು ಇಂದಿಗೆ ಸಫಲವಾಯಿತೆಂದು ಗಂಧರ್ವನು ಕೈಲಾಸಕ್ಕೆ ಹೋದನು. ಕೆಲಕಾಲಕ್ಕೆ ಸೊನ್ನಲಿಗೆಯ ಭಿಲ್ಲೇಶಬೊಮ್ಮಯ್ಯನು ಹೊಟ್ಟೆಗಿಲ್ಲದೆ ಸಾಲಮಾಡಿಯುಂಡು ಕಡೆಗೆ ವಿರಕ್ತಿಯಿಂದ ಸಿದ್ಧರಾಮಯ್ಯನಿಗೆ ನಿಷ್ಠನಾಗಿರಲು, ಸಾಲದವ ರವನಂ ಬಾಧಿಸಲಾಗಿ ಶಿವಾಲಯದಲ್ಲಿ ಅವನು ಕತ್ತಿಕೊಯ್ದುಕೊಂಡು ಸಾಯುತಲೂ ಯಮಲೋಕಕ್ಕೆವೈದು ನರಕದಲ್ಲಿ ಶಿಕ್ಷಿಸಲ್ಪಡುತ್ತಿರಲು ಗುರುಸಿದ್ಧರಾಮ ಪಾಲಿಸೆಂದು ಮೊರೆಯಿಡುತ್ತಿರ್ದನು. ಒಂದುದಿನ ಸಿದ್ಧರಾಮೇಶ್ವರನು ಕೈಲಾಸಕ್ಕೆ ಪೋಗಿರಲಾಗಿ, ಮುನ್ನ ಪೇಳ್ದ ಗಂಧರ್ವನು ಭಿಲ್ಲೇಶಬೊಮ್ಮಯ್ಯನ ದುರ್ಗತಿಯಂ ಪೇಳಲಾಗಿ ಸಿದ್ಧರಾಮೇಶ್ವರನು ಯಮಲೋಕಕ್ಕೆ ಬಂದು ನರಕಗಳಲ್ಲಿ ತನ್ನ ಯೋಗದಂಡವನಿಳುಹಿ ಪಂಚಾಕ್ಷರವಂ ಜಪಿಸಲು ನರಕದಲ್ಲಿದ್ದವರೆಲ್ಲರೂ ತತ್ಪುಣ್ಯಪ್ರಭಾವದಿಂದ ಎದ್ದುಬರಲಾಗಿ ಅವರೆಲ್ಲರಿಗೂ ಸೊನ್ನಲಿಗೆಯಲ್ಲಿ ದೀಕ್ಷೆಯಿತ್ತು ಕರುಣಿಸಲಾಗಿ ಅವರು ಗುರುದತ್ತ ಶಿವಮಂತ್ರ ಪ್ರಭಾವದಿಂದ ಕೈಲಾಸಕ್ಕೆ ಪೋದರೆಂದು ಪ್ರಹುಢರಾಯಂಗೆ ಜಕ್ಕಣಾಚಾರ್ಯ ಪೇಳಿದನು.

ಇತಿ ಶ್ರೀಮತ್ಸಿದ್ಧಾದ್ರೀಶ್ವರಮಹಾಕವಿ ಪ್ರಣೀತಮಾದ ಪ್ರೌಢರಾಯನ ಕಾವ್ಯದೊಳು ಸಪ್ತದಶಸಂಧಿ ಸಮಾಪ್ತಮಾದುದು.

ಅಂತು ಸಂಧಿ ೧೭ಕ್ಕಂ ಪದ ೯೩೭ಕ್ಕಂ ಮಂಗಳಮಹಾ.

ಶ್ರೀಗುರು ಬಸವಲಿಂಗಾಯನಮಃ

—(ಹದಿನೆಂಟನೆಯ ಸಂಧಿ ಪ್ರಾರಂಭವು.)—

ಸೂಚನೆ ॥ ಮೃಡರೂಪಜಂಗಮದ ಪಾದೋದಕವಿಮುಕ್ತಿ । ಪಡೆದಶರಣರಕಥೆಯುಪ್ರಹುಷಭೂವರನೊಡನೆ । ಕಡುರಮ್ಯವಾಗಿ ಕರಿಗೊರಲಪದಭಕ್ತನಾಜಕ್ಕಣಾಚಾರ್ಯಪೇಳ್ದ ॥ ಪದನು ॥ ಮಂಗಳಮಯಾಂಗಮಾತಂಗಸುರರಿಪುಭಂಗ । ತಿಂಗಳಿಂಗಳಪಿಂಗಳಾಕ್ಷ ಭಕ್ತರಪಕ್ಷ । ಭೃಂಗಶಿಂಜಿನಿಯಂಗದಹನಭಸ್ಮಾಭ್ಯಂಗ ಪುರಿಲಿಂಗಸುಜನಸಂಗ ॥ ಕಂಗಳಸಹಸ್ರಮುಖಾಮರಾರ್ಚಿತಪಾದಬ್ಜ । ಜಂಗಭೂಷಣತಪ್ತಕಾಂಚನಾಭಶಿರೋಜ। ಮಂಗಳಾಲಯಪಾರ್ವತೀಶಪಾಲಿಪುದೆನ್ನ ಸಂಗಮೇಶ್ವರಪ್ರಸನ್ನ ॥೧॥ ಗುರುಲಿಂಗಜಂಗಮವು

—(ಸಾರಂಗರಾಯನ ಕಥೆ.)—

ವರಭೂತಿರುದ್ರಾಕ್ಷಿ । ಹರಮಂತ್ರವಿದರೊಳಗೆ ನಾನುಬಲ್ಲನಿತವಿ । ಸ್ತರಿಸಿದೆನುಮುಂದೆಪಾದೋದಕ ಮಹತ್ವದೊಳಗೊರೆವನಿನ್ನೊಂದುಕಥೆಯ ॥ ಧರೆಯಲ್ಲಿಗೋರಾಂಡನೆಂದೆಂಬನಗರದಾ । ಅರಸುಸಾರಂಗರಾಯನು ಸಕಲಸುಖದಿಂದ । ಲಿರುತೊಬ್ಬಭೂಪನಾತ್ಮಜೆಯು ಕಡುಚಲ್ವೆಯಿರಲಾವಾರ್ತೆಯಂ ಕೇಳುತ ॥ ೨ ॥ ಭುವನಕಚ್ಚರಿಯನಿಪ ವಿವಹಸಂಭ್ರಮದಿಂದ । ಅವನೀಶನಿಬ್ಬಣವತೆರಳಿ ಆಪುರದತ್ತ । ತವಕದೊಳುಪೋಗಿತಣ್ಣಿರಪೊಗದವಳ ಮದುವೆಯಾಸುಖದಿಂದನುರಳಿ ॥ ಯುವತಿಯನ್ನೊಡಗೊಂಡು ತನ್ನ ನಿಜಪಟ್ಟಣದ ನವರಮ್ಯವಾದ ಉದ್ಯಾನದಲ್ಲಿಳಿದುಬಂ। ದವರೆಲ್ಲಕ್ರಮಗಳಿದುಮಜ್ಜನವಭೋಜನವ ನೆನುನಯದಿಮಾಡಿಬಳಿಕ ॥ ೩॥ ಸತಿಸಹಿತಸಾರಂಗಭೂಪತಾನೊಂದುಮಣಿ । ರಥದಲ್ಲಿಕುಳಿತವನದೊಳಗಿರ್ಪ ಪಲತೆರದ । ಲತೆದ್ರುಮವು ಪುಷ್ಪಫಲಗಳಹರುಷದಿಂನೋಡುತ್ತೈತರುತ್ತಿರಲ್ಕತ್ತಲು ॥ ಶಿತಿಕಂಠಶರಣಪಾಲ್ಕುರಿಗಸೋಮನಯ್ಯಾರ್ಯ । ಜಿತಕಾಮಪೂಜೆಗೆಂದೆಲರತಿರಿವುತ್ತಿರಲು । ಕ್ಷಿತಿಪತಿಯುಕಂಡುಹಿತವಿಂದೆಯತಿಯುಂದರದು ತೇರಲ್ಲಿನತನಾಗಲು ॥ ೪ ॥ ಹರಭಕ್ತಸೋಮನಾರ್ಯರು ನೋಡದಿರಲುಭೂವರ । ತನ್ನೊಳಂತೆಂದರಥದಮೇಲಿದ್ದುತಾ। ಶರಣೆಂದುದಕೆ ಸುಮ್ಮನಿಹನೆಂದುತೇರಿಂದಕೆಳಗಿಳಿದು ಪೊಡಮಟ್ಟನು ॥ ಧರೆಯಲ್ಲಿಬಿದ್ದಿರ್ದಭೂಪನತ್ತಲಿ ಕಣ್ಣತೆರದುನಿಟ್ಟಿಸದ ಬಗೆಕಂಡರಸುಕೋಪದಿಂ । ದುರಿದೆದ್ದುನಿಂದೆಲವೊಯತಿಯೆಂದು ಯರಗಿದೊಡೆಹಿರಿಯತನದಾಹೆಮ್ಮೆಯೋ ೫ ॥ ಇಂದುಧರನವತಾರವೆಂದು ಮನದೊಳ್ತಿಳಿದು । ವಂದಿಸಲು ಗರ್ವಮಂಕೊಂಡುಮಾತಾಡದೇ । ಕಂದೆರೆದುನೋಡದಪೇತಕೆ ಸುಮ್ಮನಿರ್ಪೆ ಯೋಗುಣನಿಮಗೆಚಂದವಹುದೇ ॥ ಎಂದುಧರಣೀಶನಾಡಿದನುಡಿಗೆಮನದಲ್ಲಿ । ಯೊಂದನಿಸು

ಕೋಪವಂಕುರಿಸದೇ ಯತಿರಾಯ । ಮಂದಸ್ಮಿತಾನನದಿ ಮೌನದಿಂದರೆಭೂ
ಪನೊಂದಿಮಗುಳಿಂತೆಂದನು ॥ ೬ ॥ ಪರರೂಪವನುಧರಿಸಿ ತಿರಿಯಬಲ್ಲಿರಿನೀವು
ಸರಸಿಜೋದ್ಭವಬರಹವಂಕೆಡಿಸಿಯಾಯುಷ್ಯ । ಪಿರಿದಾಗಿನಿಮ್ಮಿಂದಕೊಡ
ಲಾಗುವುದೆ ನೀವ್ರುಚಿರತಿರ್ಪುದೇನುಗುಣವು ॥ ತರವಲ್ಲಯತಿಗಳಿಗೆ ಯಿಂತರದ
ಗರ್ವವೆಸೆ । ಧರಣೀಶಕೇಳುನಾಳಿನದೊಂದು ಜಾವಕ್ಕೆ । ಮರಣನಿನಗಪುದು
ಆದರಿಂದ ಪರಸದೆನಿನ್ನ ನುಡಿಸತಾಪೆನೆ ರೋಷದಿ ॥ ೭ ॥ ಘುಡಿಘುಡಿಸಿಘೂರ್ಮಿ
ಸುತ್ತ ಪ್ರೊಢಪೀಶಕೋಪದೊಳು । ಕಡುಪಾಪಿಕೋಡಿನುಡಿವರೆ ನೀನುಯತಿ
ಯೆಂದು । ಬಿಡಲಾಯತಲ್ಲದೊಡಕಡಿದೀಡು ತುಂಡುಮಾತುವೆನೆಂದುರಥವೇರಿ
ತಾನ್ ॥ ಮಡದಿಯುಂಪಡೆಸಹಿತ ಬಳಿಕನಡಗರದಿಂದೆ ॥ ನಡದುಪುರಮಂಪೊ
ಕ್ಕು ಸಿಂಹಪೀಠದಿಕುಳಿತು । ಯೆಡಬಲದಮಕುಟವರ್ಧನರ ಮಂಡಲಿಕರೆಲ್ಲರ
ನು ಬೀಳ್ಕೊಟ್ಟುಬಳಿಕ ॥ ೮ ॥ ಸಂತಸದಲಂತಪುರವನು ಪೊಕ್ಕುತನ್ನ ಯಾ ।
ಕಾಂತೆಯುಂತಾನು ಸಂಭ್ರಮದಿಂದಲೊಂದುಯೇ । ಕಾಂತಗೃಹದೊಳುಶಕು
ನಿಮಂಚದೊಳುಹಂಸದುಪ್ಪುಳವಾಸಿನಲ್ಲೀರ್ವರೂ ॥ ಚಿಂತೆಯೆನೆಮರದುಪರಿ
ಮಳ ದ್ರವ್ಯವನುಧರಿಸಿ ಕಂತುಕೇಳಿಯೊಳು ಶ್ರಮವಡೆದುಮುಂಪೊರಗಿರಲು ।
ಅಂತಕಾಂತಕನಾಭರಣರಾತ್ರಿಯಲ್ಲಿ ಭೂಕಾಂತನಂ ಕಚ್ಚಿ ಪೊರೆಯು ॥ ೯ ॥
ಸತಿಕಂಡುಹಾನಲ್ಲಯೆಂದು ಹಂಬಲಿಸುತ್ತ । ಪತಿಯನೆಬ್ಬಿಸಲೆದ್ದು ಕಾಲೋರ
ಗನಕಂಡು। ಹತವಾಗೆಯಲೆಪುರುಷನಿನ್ನ ಗಲಿರಲೆಂದು ಮರೆಕೆಟ್ಟನೆಂದಳುತಿರೆ
ಹಿತವಾದಸೇವಕರುಮಂತ್ರಿಮುಖನಾಯಕರು । ಮತಿತವಕದಿಂದೆಲ್ಲ ರರಿದು
ದುಃಖವಮಾಡಿ । ಕ್ಷಿತಿಪಂಗೆಮರಣವಂ ಕಾದುದೆಲೆತಾಯೆಪೇಳೆಂದವರುಚಿಸ
ಗೊಳಲ್ಕೆ ॥ ೧೦ ॥ ಪರಮಾನುರಾಗದಿಂ ಮದುವೆಯಾದಾಬಳಿಕ । ಲಿರಲಿಲ್ಲತ
ನ್ನ ಸೊಡೆಗೊಂಡುತೆರಳುತ್ತಲೆ । ಪುರದಪೊರೆಗಳಿದುವನವಂ ನೋಡಬೇಕೆಂ
ದು ನಾಂಸಹಿತರಥಮಡದರ್ದು ॥ ಬರಸೋಮನಾರ್ಯರಂಕಂಡೆರಸುನಮಿಸಲ್ಕೆ
ಪರಸದಿರೆಭೂಪಕೋಪಿಸಲಾತಮರಣಪೆನ । ಅರಮನೆಗೆಬಂದು ನಿದ್ರಿಸಲುರ
ಗಮುಟ್ಟಿದುದನಿನಿತೆಲ್ಲನವರೊಳುಸರೆ ॥ ೧೧ ॥ ಅನಿತರೊಳು ಸೂರ್ಯನುದ
ಯಂಗೈಯೆಜನರೆಲ್ಲತನತನಗೆರೋದಿಸುತ ನೃಪನಶವವಂಪೊತ್ತು । ಘನಮಹಿ
ಮಸೋಮನಾರ್ಯರಬಳಿಗೆ ತಂದುಪದಕಮಲಕ್ಕೆ ನೊಸಲಸಾರ್ಚೆ। ಮನುಜೇಂ
ದ್ರನಮ್ಮಹಿಮೆಯನರಿಯದಾಡಿಮದ । ಮನದೊಳಡದೇತಪ್ಪುಕಾಯ್ದು ರಕ್ಷಿಪು
ದೆಂದು । ವನಿತೆಪರಿವಾರಮಂತ್ರಿಯುತಹಿತ ಪೊರಮಟ್ಟುಬದ್ಧಾಂಜಲಿಗಳಾಗಿ
ರೆ ॥ ೧೨ ॥ ಪೆರೆಬಂದಿರಿಯೆಂದು ಸೋಮನಾರ್ಯರುಕೇಳೆ । ನೀಕೊಡುವುದೀ
ಗಭೂಪಗೇಪ್ರಾಣದಾನವಂ । ನೀಕುವರಿನಿನ್ನ ಸುತೆ ಯಿವಳ್ಗೆ ಮುತ್ತೈದೆತನವಿ
ತ್ತು ಪಾಲಿಸುವುದೆನಲು । ಶೋಕವನುನಿಲಿಸಿ [illegible] । ವಾ

ಕುವರಹರರೂಪಜಂಗಮವನಾಕ್ಷಣದಿ । ತಾಕರಸಿಯುನ್ನತಾಸನವಿ ಕುಳ್ಳಿರಿಸಿಜಲತಂದು ಚರಣವನುತೊಳದು ॥ ೧೩ ॥ ಪಾದೋದಕವಹೇಮಕುಂಭದೊಳುತುಂಬಿರಸಿ । ಸಾದರದಅಷ್ಟವಿಧದಿಂದ ಪೂಜೆಯುಮಾಡಿ । ಭೂಧವಶರೀರವನು ತೋಯುದೊಳುತೊಳಸುತ್ತಪಣೆಗೆಭಸಿತವನುಧರಿಸಿ । ವೇದಘೋಟಕರೂಪ ಜಂಗಮನಿರೂಪದೊಳು । ಪಾದತೀರ್ಥವತೆಗದು ಅರಸಿನಂಗದಮೇಲೆ । ಯಾದಯಾಂಬುಧಿ ಸೋಮನಾರ್ಯತಳೆಯಲು ಭೂಪಕಂದೆರದುಎಚ್ಚತ್ತನು ೧೪॥ ಅರಸಿಗನುವುಂಬರಲುನೆರದಜನಹಿಗುತ್ತ । ಧರಣೀಶಜಂಗಮಕೆ ನಮಿಸಿಸೋಮನಯಾರ್ಯ । ಚರಣದೊಳುಬೀಳಲತಿ ಕರುಣದಿಂದೆಂಡು ಕರವಿಂದೆವಿಡಿದೆತ್ತುತ ॥ ಪರಮಾನುರಾಗವಿಂ ವರುಷನೂರಂಬಾಳ್ವು । ಹರಲೋಕಪಡವಾಗೆಲೆಂದುಪರಕೆಯನಿತ್ತ । ಇರುತಪಲಕಾಲವಾಗಲು ತಮ್ಮಕರವಿಷ್ಟಲಿಂಗದೊಳುಬೆರದೇರಿತ್ತ ॥ ೧೫ ॥ ಕಾಮಹರಭಕ್ತನಕಳಂಕಕಪಟವಿದೂರ ಸೋಮನಾರ್ಯರು ಪರಸಿದುದರಿಂದ ಶತವರುಷ । ವಾಮಹೀಶಂತನ್ನ ಸಹಿತಸುಖದಿ ರಾಜ್ಯಂಗೈವುತಿರ್ದಬಳಿಕ ॥ ವ್ಯೋಮಕೇಶನಹೃದಯು ಕರ್ಣಿಕಾವಾಸದೊಳು ॥ ಪ್ರೇಮದಿಂನೆಲೆಗೊಳಿಸಿ ನುತಸಿನಿಜ್ಜೆರಗಾಗ । ಸೋಮಶೇಖರನೊಲಿದು ಕೈಲಾಸಪುರಕೆಕೊಂಡೊಯ್ದುನೆಲೆ ಪ್ರಭುಡಕೇಳ್ಳೆ ॥೧೬॥ *

—(ಕಾಚಿರಾಜಯ್ಯನ ಕಥೆ.)—

ಕುಂಭಿನೀಶನೆಕೇಳು ಕುಚಿತಬುದ್ಧಿಯುಬಿಟ್ಟು । ಶಂಭುಶರಣಾಂಬುವಿನ ಮಹಿಮೆಯನು ಪೊಗಳಲ್ಕೆ । ಅಂಬುಜೋದ್ಭವಗರದು ಎಷ್ಟೆಂದುಪೇಳ್ವೆನಿನ್ನೊಂದುಕಥೆಯನುಕೇಳ್ವುದು ॥ ಜಂಬುದ್ವೀಪದೊಳಾಂಧ್ರದೇಶದಲಿ ಪುಲಿವಿಂದ್ರ ! ವೆಂಬಪುರದಲಿ ಕಾಚಿರಾಮಯ್ಯಶಿವಭಕ್ತ । ಕಂಬಳಾಶ್ವತರ ಶ್ರುತಿಕುಂಡಲನೆಭಜಿಸುತ್ತಲಷ್ಟಾವರಣವನಂಬಿ ॥ ೧೭ ॥ ಒಂದುವಿನವಾದಿಗಳುಕೂಡಿ ಕಾಶಿಯತೀರ್ಥ । ವಿಂದಧಿಕವಿಲ್ಲೆಂಬ ಪಾಸ್ತ್ರವನೊಧ್ರೇದುತಿರೆ । ಕಂದುಗೊರಳನಭಕ್ತಕಾಚಿರಾಜಯ್ಯಕೇಳುತ ಕೋಪಮಂತಾಳುತಾ ॥ ಮಂದಮತಿಗಳಿರೆಬಸುಭ್ರಷ್ಟಗಿನುಡಿವರೇ।ಯಿಂದುಧರನವತಾರ ಜಂಗಮದಚರಣಾಂಬುವಿಂದೆಘನವಿಲ್ಲೆಂಬಸಾಕ್ಷಿಯನು ನಿಮಗೆಶಿಳವಂತೆಪೇಳುವೆಕೇಳಿರೈ ॥೧೮॥ ಧರಣಿಯೊಳುರಾಜಿಸುವವಮುನ್ನೂರ ಅರವತ್ತು । ವರತೀರ್ಥದೊಳು ಭಾಗಿರಥಿಯಧಿಕವದರಿಂದ । ಪರಮಜಂಗಮದ ಪಾದೋದಕವೆ ಘನವೆಂದುಸಾರುತಿಹ ಪುರಾಣವೆ ॥ ಅರಿದವನುಮರತುಮತ್ತೇನ ನೋಡುವಿರೆನಲು । ನಿರತಕಾಶಿಮವುದಕಮಿಗಿಲೆಂಬ ಆಗಮವ । ತ್ವರಿತದಿಂದೋದಲ್ಕೆ ಕಾಚಿರಾಜಂಕೇಳ್ಳು ಕೇಳೆಲವೊವಾದಿಗಳಿರಾ ॥ ೧೯ ॥ ಸಕಲಜೀವರಿಗೆಕಾಶಿಯು ತೋಯವೇಘನವು । ಶಶಿಭವನನಾಶ್ರಿಯನು ಹೃದಯಕಮಲದೊಳಿಟ್ಟು । ಸುಖದಿಂದಬಾ

ಘುಲಿಸವೀರಶೈವರಿಗೆ ಸಮ್ಮತವಲ್ಲಕೇಳುಶಿವನ ॥ ಮುಖವಾದಜಂಗಮದ ಪಾದಸೇಚನಜಲವಧಿಕವೆಂಬಸಾಕ್ಷ್ಯಿಯನು ನೋಡುತತಪ್ಪಗಾ । ಕೈಯಿಟ್ಟು ಪೋಗೆಂದುಸದುಷದೊಳು ಕಾಚಿರಾಜಯ್ಯ ನುಡಿವುತಲಿರ್ದನು ॥೨೦॥ಗ್ರಂಥ॥ ಪಾಕಾರಂಪರಮಜ್ಞಾನಂ ದೋಕಾರಂ ದೋಷನಾಶನಂ ॥ ದಕಾರಂದನಶೆವಿಸ್ತ್ರಕಕಾರಂಕಲುಷಾಪಹಂ ॥ ೧ ॥ ಶೋಷಣಂಪಾಪಪಂಕಸ್ಯ ದೀಪನಂಜ್ಞಾನತೇಜಸಃ । ಚಿರಪಾದೋದಕಂಪೀತ್ವಾ ತರೇಚ್ಚ ಭವಸಾಗರಂ ॥೨॥ ಇಂತೆಂಬಸಾಕ್ಷ್ಯಗಳ ನೋಡಿದಡೆಕೇಳದೇ । ಮುಂತದೃಷ್ಟವತೋರಿ ಸೆಂದವರುನುಡಿಯಲಿಕೆ । ಕಂತುಮರ್ದನಶರಣ ಕಾಚಿರಾಜಯ್ಯಗಳು ಕಾಶಿಯಾಜಲವತರಿಸಿ ಅಂತಕಾಂತಕರೂಪ ಚರಚರಣತೀರ್ಥವಮ। ಸಂಕಸವಿತಾ ಸಿನಲಿ ತೂಗೆಪಾದಾಂಬುಭೊ । ಕಾಂತೆ ಯುಂಬಿಟ್ಟೇಳ ದಿರೆಕಂಡುತಮ್ಮೇಳಾಲೋಚಿಸುತಲಿಂತೆಂದರು ॥೨೧॥ಎಲೆಕಾಚಿರಾಜಯ್ಯ ಜಂಗಮದಪಾದಾಂಬು । ಬಲಪಾದುದಂತಿರಲಿಯುದರಗುಣವೆಂತಿಸುದು । ಸಲೆವೃಷಣ್ಣೀತವ್ರೋಮಾಜದೆಂನೊಳುಪೇಳು ಎನಲಾತನಿಂತೆಂದನು ॥ ಪಲವುಮಾತೇಕೆತೀರ್ಥದೊಳೆರಡುಗುಣವುಂಟು।ನಲುವಿಂದನಂಬಿರ್ದಭಕ್ತರಿಗೆಶಾಂತಿರೂಪಿ।ಲಿತೋರ್ಕುನಂಬದವರಿಗೆ ಯುಗ್ನಿಯಾಗಿಪ್ಪುದೆನಲದಂ ತೋರಿಸೆನಲು ॥ ೨೨ ॥ ಹರಶರಣಪಾದೋದಕವತೆಗದು ತಮ್ಮಯಾ ॥ ಕರದಲ್ಲಿಪಿಡಿದುಪಾದಿಯುಕೇರಿಗಳಕಡೆಗೆ । ಸದುಷದೊಳುಚೆಲ್ಲಿದಡೆಕೋಟಿಸಿಡಿಲೆರಗಿಗರ್ಜಿಸಿದಂತೆರಭಸದಿಂದ॥ ಸೊರೆವೃತ್ತಪ್ರಳಯಾಗ್ನಿಯಂತೆಪಾದಿಗಳಗೃಹ ॥ ತಿರುತಿರುಗಿವುರಿವುರಿತಿರ ಲೆಲ್ಲರುಂ ವೊರೆಯಿಡಲು ॥ ಕರುಣದಿಂದವರಮನೆಗಳನುಳುಹಿ ಮರಣವಾದವರ್ಗ ಪ್ರಾಣವನೆಕೊಟ್ಟು ॥ ೨೩ ॥ ಭವಕೆಕುರಿಯಾದಪಾದಿಗಳನೆಲ್ಲರನಾಗ । ತವಕವಿಂಭಕ್ತರಂಮಾಡಿ ಸಂತಸವಿದ್ದ । ಷ್ಟವಮೆರದುಸಕಲಜನರಿಂದೆ ಕೀರ್ತಿಸಿಕೊಂಡು ಹರಬಿರುದಕೊಂಡಾಡುತ ॥ ಭುವನಕಚ್ಚರಿಯೆನಿಸಿ ಕರಪೀಠದಲ್ಲಿ ಸೇವ । ಶಿವಲಿಂಗದಲ್ಲಿಲಯವಾದರೆಲೆಪ್ರಭುಡಭೂ । ವರನೆಕೇಳೆಂದೊರೆದಜಕ್ಕಣಾಚಾರ್ಯಹರಿಭಕ್ತರಾಸಾಕಾರ್ಯನು ॥೨೪॥ ಮನುಜೇಂದ್ರಕೇಳು ಮತ್ತೊಂದುಕಥೆಯಂಪೇಳ್ವೆ । ಕನಕಾ

—(ಘಂಟಾಕರ್ಣ ಗಣನಾಥನ ಕಥೆ.)—

ದ್ರಿಯಲ್ಲಿಘಂಟಾಕರ್ಣಗಣನಾಥ । ಘನಮಹಿಮವೀರಶೈವಾಚಾರನಿಷ್ಠೆಯಲಿ ಪರಮಸದ್ಭಕ್ತಿಯೊಳಿರೆ ॥ ಅನವರತಶಿವಿಯಲ್ಲಿ ಯುಪಶಬ್ದಬೀಳ್ವುದೆಂ। ದೆನುತ ಶಿವಿಗಳಲಿಘಂಟೆಗಳನುಡಿವುತ್ತಿರುವ । ಮನಲೀನವಾಗಿಷ್ಟಲಿಂಗವನು ಭಜಿಸುತ್ತತನುಮೂರಸೊಂದುಮಾಡಿ ॥೨೫॥ ಸುರಹೊನ್ನೆಸಂಪಿಗೆಯು ಜಾಲಿಪಾಟಾಶಪಾ । ದರಿಪಾರಿಜಾತ ಪಂಕಜದವನಬಕುಳಬಂ । ಧುರವು ಇರುವಂತಿಗೆಯುಸೇವಂತಿ ಯೆಲರ್ಗಂಚಿ ಮೊಲ್ಲೆಮಲ್ಲಿಗೆಜಾಜಿಯು ॥ ಕರವೀರಕುಮುದ

ಮೊದಲಾದಪ್ರಪಂಗಳನು । ಧರಿಸುತ್ತಲಷ್ಟವಿಧ ಪೋಡಶೋಪಚಾರಕ್ರಮ
ವರಿತುಪೂಜಿಸುತನಿರ್ಮಾಲ್ಯವದುತೆಗದಿಡಲು ಪ್ರಾಣಗದೇಯಿರುತ್ತಿರ್ಪವು ॥೧೬॥
ಎಂದೆಂದುಸೂರ್ಯನುಷ್ಣವಕರೆಯುನ್ನೈದಿಲೆಯು । ನಿಮ್ಮ ಕೃತ್ಯವತೋರ್ಪ ಮೃಗ
ಪಕ್ಷಿಕ್ರಿಮಿಕೀಟ । ವೊಂದಾಗಿತಮ್ಮ ಶ್ರೈರವಮರೆತುಚರಿಸುವವು ಮುನಿಪನಾ
ಜ್ಞಾಭಯದಲಿ ॥ ಕುಂದಕೊರತೆಯಮರತು ಮುನಿಪನಾಶ್ರಮದೊಳಿರ ।
ಲೊಂದುದಿನನಿರ್ಮಾಲ್ಯದರಲು ಬಾಡಿರೆಕೋಪ । ದಿಂದಖದ್ಯೋತನಂಶಾಪಿಸಿದ
ನತಿಕುಷ್ಠರೋಗಿಯಾಗೆಂದೆನುತ್ತ ॥೧೭॥ ಗಣನಾಥಶಪಿಸೆ ರವಿನಡನಡುಗಿಚ
ರಣಕ್ಕೆ । ಮಣಿದುಯೆಲೆದೇವ ಸರ್ವದಸಾರವೆಲ್ಲವನುಪ್ರೋಣಗಿಪುದು ಎನ್ನ ಗುಣ
ನಿಮ್ಮನಿರ್ಮಾಲ್ಯವೆಂದರಿಯೆ ಯೆನ್ನ ಪರಾಭವ ॥ ಎಣಿಕೆಗೊಳದೇಕರುಣದಿಂದ
ನಿಶ್ಶಾಪವಿ । ತ್ತಣುಗನೆಂದೆನ್ನ ಪ್ರತಿಪಾಲಿಸುವುದೆಂದುದಿನ । ಮಣಿದೈನ್ಯಬಡ
ಲುಘಂಟಾಕರ್ಣಗಣನಾಥ ಹರುಷದಿಂ ದಿಂತೆಂದನು ॥೧೮॥ ದಿನಕರನೆನಿನಗಾ
ದಶಾಪದನಿವೃತ್ತಿಯನು । ಮನುಹರಗಣೇಶನಂಘ್ರಿಯಜಲದಿನಿನ್ನ ಯಾತನು
ಶುದ್ಧವಹುದುಪ್ರೋಗೆನೆ ಕಾಶಿಯಲ್ಲಿರ್ಪಬಾಲಾರ್ಕಲಿಂಗದೆಡೆಗೆ ॥ ಕನಲುತ್ತ
ಪ್ರಭೆಗಳದುಬಂದುಪೊಡಮಟ್ಟುಕರ । ವನುಮುಗಿದುನಿಂದು ನಿಗಮಾಭೇದ್ಯನಿ
ರ್ವರಣ । ಮನಸಿಜಾಂತಕನಘನಪ್ರತಿಮ ಮನುಜಸುರನಾಗಾದಿ ನತಚರಣ
ನೇ ॥೧೯॥ ಸುರರಾಜಮುಖ್ಯದಿಕ್ಪಾಲವಂದಿತಪಾದ । ಪರಮಋಷಿನಿಕರಹೃ
ತ್ಕಮಲದತಾರಾಧೀಶ । ಅರವಿಂದಭವಶಿರಸಗ್ಗೈಯ್ಯಮಾಪತಿ ಪ್ರಿಯಶರಜನ್ಮ
ಕರಿಶಿರಯ್ಯ ॥ ದುರಿತಭೂಧರಕುಲಿಶ ಧೂರ್ಜಟಿವಿರೂಪಾಕ್ಷ । ಕರುಣದಿಂದೆ
ನ್ನ ತರಿರವಕುಷ್ಠವನುಕಳೆದು । ಪರಮಕಳೆಯಿತ್ತುಸಲಹೆಂದುನುತಿಸಲ್ಕೆ ಪರ
ಮೇಶನಿಂತೆಂದನಾಗ ॥ ೨೦ ॥ ನಿಶಿವೈರಿಕೇಳುಘಂಟಾಕರ್ಣಗಣನಾಥ । ಬಿಸಿ
ಗೋಪದಿಂದಿತ್ತ ಶಾಪಬಿಡದಾತನಿನ । ಗುಸುರ್ದಂತೆತಪೆಪ್ರೋಗಿ ಮುಮುಹರಗ
ಣೇಶ್ವರನಪಾದೋದಕವಿ ಸೀನುಪ್ರೊರಳೇ ॥ ಹಸನಹುದುನಿನ್ನ ತನುಪ್ರೋಗೆಂ
ದುಬೀಳ್ಕೊಡಲು । ಬಸವಳಿದುಬೆಂಡಾಗಿ ಮುಮುಹರಗಣೇಶ್ವರನ । ಎಸೆವಚರ
ಣೋದಕವನಾಂತ್ಸನಾಗುತನಮಿಸಿ ಬಿಸಿಗದಿರಪ್ರೋಗಿತಮ್ಮ ॥೨೧॥ ನಿತ್ಯಕೃತ್ಯ
ವಬಿಡದೆನಡಸುತ್ತಶಿವಭಕ್ತ । ರತ್ಯಧಿಕರೆಂದುಮನದಲ್ಲಿತಾಹೆದರಿಯಾ । ದಿತ್ಯ
ಮನ್ನಿಸುತಮೊದಲಂತೆಗಗನಾಂಗಣದಿ ಹರುಷದಲಿಚರಿಸುತಿರ್ಪಂ॥ಮೃತ್ಯುಹರ
ರೂಪಚರತೀರ್ಥವೇಘದಘನವು। ಸತ್ಯವಿದುಮತೊಂದುಕಥೆಯನುರ್ದಪೆನಿನ
ಗೆ। ವಿಘ್ನವನುಬಿಟ್ಟಾಲಿಸೆಂದನಾ ಪ್ರಹುಧಭೂಪೋತ್ತಮಗೆಜಕ್ಕಣಾರ್ಯಂ ॥

—(ಮಂಗಾಯಿಕ್ಕಯರಸಿ ಕಥೆ.)—

ಕರವೂರಪುರದರಸು ರಾಜೇಂದ್ರಚೋಳಭೂ । ವರತನ್ನ ತನುಜಾತೆ
ಮಂಗಾಯಿಕ್ಕರಸಿಯನು । ಧರಣೀಶಪಾಂಡ್ಯಮಂಡಲವನಾಳಿಸುವ ದೇವನ

ಪಾಂಡ್ಯರಾಯಗೆ ॥ ಪರಮಸಂಭ್ರಮದಿ ಶುಭಲಗ್ನ ಸುಕ್ಷೇಮದೊಳು । ಹ
ರುಷದಿಂ ವೆರಸಿ ಜನನಾಥ ಮದುವೆಯ ಮಾಡಿ । ಕರಿತುರಗಗೋಮಹಿಷೆಧರತ್ನ
ಧನಕನಕ ವರವಸ್ತ್ರ ದಾಸಿಯರನು ॥೩೩॥ ಇನಿತೆಲ್ಲವಿತ್ತು ಪುರುಷಾಲಯಕೆತ
ನ್ನ ಯಾ । ತನುಜಾತೆಯನು ಕಳುಹಿ ಸಂಗಡದೊಳಿರ್ದವಳ । ಅನುಕ್ರಮವನ
ಡಸುದಕೆ ಕುಲಚ್ಚರಿಯರೆಂಬ ಯೋಗೀಶ್ವರನ ಪೋಗೆನಲ್ಕೆ ॥ ಘನಹರ್ಷದಿಂ
ಬಂದು ಮಧುರೆಯೊಳಗಿರುತಿರಲು । ಮನವೊಲಿದು ಪಾಂಡ್ಯಭೂವರ ಬಸುಳೆವ
ನ್ನಿಸುತ । ವಿನಯದಿಂ ಪಲಕಾಲ ಸತಿಸಹಿತ ಸುಖದಿಂದ ರಾಜ್ಯವಂ ನಾಳುತಿರ್ಪಂ
೩೪ ॥ ಜಿನ್ನನೇ ದೈವವಲ್ಲದೆ ಬೇರೆಯಿಲ್ಲೆನುತ । ತನ್ನ ಪುರಜನಕೆಲ್ಲ ಶ್ರಮಣರನೆ
ಭಜಿಸೆಂದು । ಮುನ್ನ ಡಂಗುರಸಾರೆ ಶಿವಭಕ್ತರಾದವರು ಬಿಟ್ಟು ಪರವೂರ್ಗೆ
ಪೋಗೆ ॥ ಪನ್ನಗಾಭರಣ ಪೂಜೆಗೂನತೆಲ್ಲದೆ ಭೂಪ । ತನ್ನ ಮನದಲ್ಲಿರಲು ಸತಿ
ಯು ಮಂಗಾಯರಿಸಿ । ಇನ್ನು ನಾನೆಂತು ಜಯಿಸುವೆನೆಂದು ಮನದಲ್ಲಿ ಚಿಂತಿಸುತ
ಲಿಂತೆಂದಳು ॥೩೫॥ ಕರಿಗೊರಳನೇ ದೈವ ಶಿವಭಕ್ತರೇ ಬಂದು । ಹರಪೂಜೆಯೆ
ನೆಬಿಡನೆನುತ್ತ ಧೈರ್ಯವಾಳ್ದ । ಗಿರಿಜೇಶನಾರಾಧನೆಯ ನಿತ್ಯ ಮಾಡುತಿರೆ ಕೂನ
ಪಾಂಡ್ಯ ಯುಕೋಪದಿ ॥ ತರುಣಿಯನು ಕರೆದು ಎಲೆ ನೀ ರಜಿನ್ನ ನೆಪರಾ । ತ್ವರ
ವೆಂದು ನಂಬದೇ ಯೆನ್ನ ಮತವನು ಬಿಟ್ಟು । ಗೊರವನಂ ಭಜಿಸುವುದು ದಾವನೀ
ತಿಯು ಮೆನಲು ತರಳಾಕ್ಷಿ ಮಗುಳೆಂದಳು ॥ ೩೬ ॥ ಸಕಲ ದೈವಗಳೊಡೆಯ ಶಿವ
ನೆಂದು ಸಾರುತಿಹ । ಅಖಿಳಶಾಸ್ತ್ರಾಗಮದ ಮುಖದಿಂದ ತಿಳಿಯದೇ । ಕಕುಭ
ವಸನನ ಜರಿದು ಮಗುಳೆ ಮಾತಾಡಿದರೆ ಕರಿನಿಕರೆ ಸರಿಯು ಹರಿಗೆ ॥ ಚಕಿತಮಹಿದ
ತ್ರಶ್ರುತಿದೂರ ಶಂಕರ ಸರ್ವಾಧಿಕ ಗುಳಿದರೆಣೆಯೆ ನೀ ಯಥಮ ಬುದ್ಧಿಯ ಬಿಟ್ಟು
ಶಿಖಿನಯನನ ಭಜಿಸಿ ಮುಕ್ತಿಯಂ ಪಡೆಯೆಂದ ಮಂಗಾಯಕ್ಕರಸಿ ನುಡಿಯೆ ॥೩೭
ಹರಿಣಲೋಚನೆ ನಿನ್ನ ಗುರುವನಿಲ್ಲಿಗೆ ಕರಸಿ । ತ್ವರಿತದಲಿ ವಾದದೊಳು ನಮ್ಮ
ವರಸೋಲಿಸಲು । ಹರಭಕ್ತ ನಪ್ಪೆನಲ್ಲದೊಡೆ ನಿನ್ನ ಯ ಕರಣಗೋಳ್ಪದೇಬಿಡ
ನೆನಲ್ಕೆ । ಧರಣೀಶ ನೀ ನಾಟಿದುದಕೆ ತಪ್ಪವಿರೆಂದು । ತರುಣಿ ತನ್ನಾಲಯದೊಳಿ
ರು ತೊಂದು ದಿನಕುಲ । ಚ್ಚರಿಯರಂ ಕರಸಿ ತಿರು । ಜ್ಞಾನಸಂಬಂಧಿಗಳ ಬರಿಸ
ಬೇಕೆಂದು ಪೇಳೆ ॥ ೩೮ ॥ ನಳಿನಾಕ್ಷಿ ಮಂಗಾಯಕ್ಕರಿಸಿ ಪೇಳಿದ ನುಡಿಗೆ । ಒಳಿ
ತೆಂದು ಯಲೆತಾಯ ನೀನಂಜದಿರು ಇದಕೆ । ಛಳಿವೆಟ್ಟಣಗಿಯಾಣ್ಮ ಸಾಲಿ
ಸುವನೆಂದು ಸಂತವಿಸಿ ನಿಜಗೃಹಕೆ ಬಂದು ॥ ಬಳಿಕೆಲವರಿರ್ಪತಾಣವನರಸಿ ಬಾ
ಯೆಂದು । ತಳುಸದೇ ತನ್ನಾಪ್ತರಂ ಕಳುಹಿ ಸುಖವಿರಲು । ಕಳೆಧರನ ಭಕ್ತಕು
ಲಚರಿಯರಿಂಗಾ ಕಾಶವಾಕಾದುದಾ ಕಾಲದಿ ॥ ೩೯ ॥ ಮುಂದೆಕ್ಕೈನೆರನಾದಬು
ರುತಿಸುದು ಕಾಪೊರ್ನ್ನ । ದಿಂದೆ ಶೂಲಗಳು ಪದುನೆಂಟು ಸಾಸಿರವರಟಿ । ಸಂ
ದುಸುರಿವಾಡಿ ಕೊಳೆಯಾಮಳ ಲೊಡಗಿಸಿರೆ ಬಂದರಾ ಪೋದಚರರು ॥ ತಂದೆ

ಜಿನ್ನಪಕೇಳು ಈಗತಿರುಜ್ಞಾನಸಂ । ಬಂಧಿಗಳಚೋಳಮಂಡಲಕೆಬಂದಿಹರೆ
ನಲು । ವ್ರೊಂದಾರುಭುಜವಾಗಿಭೂಪನಂ ಬೀಳ್ಕೊಂಡುಬಂದನವರಿದ್ದಬಳಿಗೆ॥
೬೦ ॥ ಅವರಕಾಣುತ್ತವಂದನೆಗೈದುಭಿನ್ನಹವ । ನವಧರಿಸುದೇವಜನಸಂಘವೆ
ಗ್ಗಳಿಸೆಂದು । ಶಿವಭಕ್ತಿಗೂಣಿಸುವವಾಪತಿಶಿಸ ನಿಮ್ಮನುತೆಮಂಗಾಯಕ್ಕರ
ಸಿತನ್ನ । ಧವನೊಡನೆವಾದದೊಳುನಿಮ್ಮಕರಸಿದಳೆನಲು॥ ತವಕದಲಿತಳದುರ್ಗ
ಬರುತಿರೆಪಥವಿಜಿನರಕ್ಶತ । ಕವನೆಲಿದುಬಂದುಮಧುರೆಯು ಪುರವಹೊಕ್ಕನಾ
ತಿರುಜ್ಞಾನಸಂಬಂಧಿಯು ॥ ೬೧ ॥ ಬಂದಬರವಂಕೇಳಿ ಯಿಂದುಮುಖಿಯಿದಿ
ರ್ಗೊಂಡು । ಮಂದಿರಕೆಕರತಂದು ಭೂಪನಾಸ್ಥಾನದೊಳ । ಗೊಂದುಗದ್ದುಗೆ
ಯಿಕ್ಕಿಕುಳ್ಳಿರಿಸಿ ಕಾಲೋಪಚಾರದೊಳುಸತ್ಕರಿಸುತ ॥ ದ್ವಂದ್ವಕರವುಗಿದು
ನಿಂದಿರ್ದತನ್ನಯಮಡದಿ । ಯಂದವನುನೋಡುತ್ತ ಕೂನಪಾಂಡ್ಯಶ್ರವಣ ।
ಸಂದೋಹವನುಕರಸಿ ವಾದವನುಮಾಡಿಸಿದನೇನೆಂಬೆನಚ್ಚರಿಯನು॥೬೨॥ ಕೇ
ಳುಭೂನಾಥಸಭೆಯುಳ್ಳಿಜಿನ್ನರಸಂಘ । ಗೋಳಿಟ್ಟುವೊಂದೊಂದಗಳಸಲ್ಲಿನ
ಸುನಗುತ । ಭಾಳಾಕ್ಷನೀಮಂತವಮಣಿ ಶ್ರುತಿಸ್ಮೃತಿಶಾಸ್ತ್ರ ವುಪನಿಷದ್ವಾಕ್ಯ
ದಿಂದ ॥ ಪೇಳುತವರೆಲ್ಲರನಿರುತ್ತರರವಾಪಲ್ಕಿ। ಕೂಳಶ್ರವಣರುನುಡಿದರೆಮಗೆ
ದೃಷ್ಟವತೋರಿ । ನಾಳೆಶಂಕೆಣಸಪ್ರಾಣಿಸಿನೆನಲು ತಿರುಜ್ಞಾನಸಂಬಂಧಿ
ಯಿಂತೆಂದನು ॥೬೩॥ ಧರಣೀಶನಿನ್ನಜಿನ್ನಿನಕೂನಕಳೆದುಸುಂ। ದರಕಾಯನಂ
ವಾಡಲಿವರುಪೇಳಿದತೆರದ । ಲಿರುವೆನಾನಿವರಿಂದಲಾಗವಿರೆಶೂಲಕ್ಕೆ ಹಾಕಿಪು
ದುದಿಟವಾಪಡೆ॥ ಅರಗಳಿಗೆಯುಳ್ಳಿನಿನ್ನಂಗಶುದ್ಧವಮಾಡಿ। ಪರಶರಣರೀಗತೋ
ರುವರೆನಲು ಮನದಲ್ಲಿ । ಪರುಷವಿಮ್ಮಡಿಸಿಜಿನ್ನರಮೇಲೆ ಕೋಪಿಸುತ ಬರೆಸಿ
ಯುತ್ತರವನೆನಲು ॥೬೪॥ ಪೆದರಿಜೈನರಸಂಘಮುಡವಡಗಿಪೋಗಬಾಡಿ । ಕುಧ
ವನಿನ್ನಯಕೂನ ನಿವಕಳೆಯೆನಮು.ಶೂ । ಲವಿಸಾಕಿಸುವ್ರದೆಂದುಭಾಷೆ ಪತ್ರ
ವಬರದುಕೊಡಲು ಭೂವರಶರಣನ ॥ ವದನವೀಕ್ಷಿಸಿಮಂಗಯಕ್ಕರಸಿಯಿಂದೆ
ಸಾ । ದುದಕಭಸ್ಮವಧರಿಸಿ ಮೂರುಗುಪ್ತನೆಗುದ್ದಿ । ಸಿದರೆತನುಶುದ್ಧವಾಗಲು
ಜನಪವೆಚ್ಚಿ ಶಿವಭಕ್ತರನು ಕೊಂಡಾಡುತ ॥ ೬೫ ॥ ಮುನ್ನ ಕುಲಚರಿಯುರುಂ
ವಾದಿಸಿದಶೂಲಕ್ಕೆ । ಜಿನ್ನರೆಲ್ಲರಹಾಯ್ಕಿ ಇಷ್ಟಲಿಂಗವಧರಿಸಿ । ಪನ್ನಗಭರ
ಣಭಕ್ತನಾಗಿಯುಸ್ವಾವರಣವನುಬಿಡದಲನುಸರಿಸುತ ॥ ಭಿನ್ನವಿಲ್ಲದೆನಂಬಿಶಿವ
ಧ್ವಜಕರೆಂಬವರು । ತನ್ನಬಂಧುಗಳೆಂದುಭಕ್ತಿಯನುಮಾಡುತ್ತ । ಚನ್ನನದ್ಗು
ಣವನ್ನೆ ಮಂಗಯಕ್ಕರಸಿ ಸಹರಾಜ ಮನಾಳುತಿರ್ದಂ ॥ ॥೬೬॥

—(ಚೇರಚೋಳಪಾಂಡ್ಯರ ಕಥೆ.)—

ಕೇಳಭಾಸ್ಯಯದೇಶದೊಳು ಮಹೀತಳವಾಳ್ವ । ಚೇರನುಮಹೀಶ ಕರ
ವೀರನ್ಯಾದವಿಂದ । ಧೀರರಾಜೇಂದ್ರಚೋಳರು ಕೂನಪಾಂಡ್ಯರೊಳುನಿ

ತ್ರತ್ವದಿಂದಿರುತಿರೆ ॥ ವಾಸುವಂಗಳನೇರಿವೈಹಾಳಿಮುಖದಿಂದ । ವಾರಿಜೋ
ದ್ಭವವಿಷ್ಣು ಸುರಪಮುಖ್ಯರವೊಳಲ । ನಾರೈದುನಿತ್ಯಬರುತಿರೆ ಲೊಂದುದಿವಸ
ಜಂಭಾರಿಯೋಲಗಕೆಪ್ರೋಗಿ ॥ ೪೭ ॥ ಸದುವಿನಯದಿಂದೆ ಸುರಪನೆಕೂಡೆವಾ
ತಾಡಿ । ಕುದುರೆಗಳನಡರ್ದು ತಮ್ಮಪುರಕೆಪ್ರೋಗಲ್ಕೆ । ತ್ರಿದಶಪತಿಕೋಪ
ವನುತಾಳ್ದು ನರರೆಮ್ಮನಂವಂದಿಸದೆಪ್ರೋದರೆಂದು ॥ ಇದಕೇನುಪಾಯವೆಂದ
ನುತತನ್ನೊಳುತಿಳಿದು । ಪದುಳದಿಂದಮರಾವತಿಯ ಬಾಗಿಲದಗೋಪು । ರದ
ಮೇಲತನ್ನ ಪಾವುಗೆಯನಿರಿಸಲ್ಕವರು ಮರುದಿವಸಬಂದುಕಂಡು ॥ ೪೮ ॥ ಸುರ
ಪಮಾಡಿದಕೃತಕವರಿತುಬಾಗಿಲಪೊಗದ । ತುರಗವನುಗೋಪುರದಮೇಲೆಹಾ
ರಿಸಿಪ್ರೋಗಿ । ಗಿರಿವೈರಿಯನುಕಂಡುಮರಳಿಯಾತೆರದೆ ಮೂವರುತಮ್ಮನಿಜನ
ಗರಕೆ ॥ ತೆರಳಲ್ಕೆಯಮರೇಂದ್ರನತಿಕೋಪಮಂತಾಳ್ದು । ಕರಸಿನಕ್ಷತ್ರಗಳ
ಮೂರುರಾಜ್ಯಕೆಮಳೆಯ । ಕರೆಯದಂತಾಜ್ಞೆಯನುಮಾಡಿಸಲು ಪನ್ನೆರಡು
ವರುಷಬರಬೀಳಲೊಡನೆ ॥೪೯॥ ಜನರೆಲ್ಲಶ್ರಮದಿಭೂಪಾಲರಿಗೆಮೊರೆಯಿಡಲಾ
ಮುನಿದುಮೂವರುಕೂಡಿ ಯತಿತವಕದಲಿಸ್ವರ್ಗ । ವನುಮುತ್ತಿಬಿಡದೆವಿಂಶತಿ
ಸಪ್ತನಕ್ಷತ್ರಗಳಕಂಡುಸೆರೆಯಹಾಕಿ ॥ ಅನಿಮಿಷರಪತಿನಮ್ಮಮೇಲೆದಂಡೆತ್ತಿ
ಬ । ಪ್ಪನುಯೆನುತ ಚೇರಪಾಂಡ್ಯಚೊಕ್ಕನಾಯಸಾ । ರನುಕರೆಸಿಪ್ರೊನ್ನ
ನಗಣಿತಮಿತ್ತು ವೊಂದೆರಡುಕೋಟಿವಾಜಿಯತರಿಸೆನೆ ॥೫೦॥ ಅರಸನಿತ್ತನಿತ
ದ್ರವ್ಯವತಮ್ಮಮನೆಯಲಿಯೆ । ಯಿರಿಸೆಶಿವಜಂಗಮಾರ್ಚನೆಯಮಾಡುತ್ತಿರಲು
ಅರೆಗಾಣಿಯಿಲ್ಲದಂತಾಗಲನಿತರೊಳು ಸುರರಾಜಬಲಸಹಿತಬರಲು ॥ ತುರಗವ
ನುತರೆಲಿದ್ದ ಭೂಪಬೈದಪನೆಂದು । ಹಿರಿದುಚಿಂತಿಸಿಬ್ರಹ್ಮದೊಳುಬೆರೆತುಜ್ಞಾ
ನವರ । ಹುರಿಸಿಚೆರರಂಕಳುಹಿ ಜಂಬುಕಸಮೂಹಮಂತರಿಸಿದನು ಪರುಷದಿ
ದ ॥೫೧॥ ತಂದೆನರಿಗಳನೆಲ್ಲವೊಂದು ಬಳಿಯಲ್ಲಿರಿಸಿ । ಇಂದುಧರನಂಭಜಿಸಿ
ರನಪಾದೋದಕವ । ಚಂದದಿಂದೊಯ್ದುತಳಿಯಲು ವಾಯುವೇಗದತುರಂ
ವಾದವುತಕ್ಷಣಂ ॥ ನಿಂವಿರ್ದವರುಬಂದುಭೂವರನೊಳುಸುರಲ್ಕೆ । ತಂದ
ಮಂಕಂಡು ಘನಮಹಿಮನೆಂದುಪದ । ದ್ವಂದ್ವಕ್ಕೆವಣೆವಂದು ಸಾಷ್ಟಾಂಗ
ನತನಾಗಿ ಕರಯುಗವಮುಗಿದುನಿಂದು ॥೫೨॥ ಪರಶರಣನಿನ್ನ ಕೈಯಿಂದಸೇ
ಯಕೊಂಡೆ । ದುರಿತಕಿನ್ನೇಗೈವೆನೆಂದುದೈನ್ಯಂಬಡುವ । ಧರಣೀಶಗಭಯನಿ
ವೃತ ತನ್ನ ಮಂತ್ರಿತನಕುಲಚ್ಚರಿಯರಿಗೆವೊಪ್ಪಿಸಿ ॥ ಪರಮುನಿಚ್ಚರಗಿನಿಂದಿ
ಚೊಕ್ಕಪಾಂಡ್ಯಭೂ । ವರನವಿಸಿಬೇಳ್ಕೊಂಡು ನಿಜಮಂದಿರಕೆಬಂದು। ನ
ಷದಿಂಕುಲಚ್ಚರಿಸಹಿತಾನು ಸುಖದಿರಾಜ್ಯಂಗೈವುತಿರಲಿತ್ತಲು ॥೫೩॥ ತೆ
ಸಕೋಟಿಸುರನಿತರಸಹಿತಪರಿಪ್ರ । ಬತ್ತಿಸಾಯುಧನಾಂತು ಬಂದುತಮ್ಮ
ಪುರವ । ಮುತ್ತಿಗೋಳಿಚೆಕ್ಕಪಾಂಡ್ಯನು ಬೇಗಬಂದಹಿತಪುರವಮುತ್ತಿ ಕಾ

ತಿರಲು ॥ ಮತ್ತಿವನಕಡೆಗೆಚೇರಮನು ರಾಜೇಂದ್ರಭೂ । ಪೋತ್ತಮನುಚರ ನಲ್ಲೆ ನಿರ್ಜರೇಶನಮುರಿದು । ಲೊತ್ತಿ ಜೆನ್ನಟ್ಟಸ್ವರ್ಗವ ಸೂರೆಗೈಯಲ್ಕೆಜಂ ಭಾರಿಚಿಂತಿಸುತಿರೆ ॥೫೪॥ ಗುರುಬೃಹಸ್ಪತಿಬಂದು ಸುರಪಚಿಂತಿಸಲೇಕೆ । ಹರ ಭಕ್ತರೊಡನೆ ಕದನವುಸಲ್ಲದೈನೀನು । ಭರದಿಂದವರಬಳಿಗೆಪೋಗಿ ದೈನ್ಯಂ ಬಿಟ್ಟುಶರಣುಹೊಕ್ಕರೆಬಿಡುವರು ॥ ಬರಿದೆಪೌರುಷದಿ ಭಂಗಿತನಾಗಬೇಡೆಂದು ಕರದೊಯ್ದು ಸಮರಸವಮಾಡಿ ನಕ್ಷತ್ರಗಳ । ಸೆರೆಬಿಡಿಸಿಕೊಂಡವರಬೀಳ್ಕೊಟ್ಟುಗೀರ್ವಾಣಪತಿ ಸುಖದೊಳಿರಲಿತ್ತಲು ॥ ... ॥೫೫॥

—(ಕುಂಚಟ್ಟಿಗರಿಯುರಾದ ಮಾಣಿಕ್ಯವಾಸರಕಥೆ.)—

ಚಿತ್ತಪಲ್ಲಟವಿಲ್ಲದಾಲಿಸಲಿಪ್ರುಡಭೂ । ಪೋತ್ತಮನೆಮರಳಿಮುವ್ವರುತಮ್ಮರಾಜ್ಯವಾ । ಳುತ್ತಸುಖದಿಂದಿರಲ್ಕಿತ್ತಕುಂಚರ್ಯರಂಪಾಂಡ್ಯಸೌಂದರರಾಯನು ॥ ಉತ್ತಮದಮಂತ್ರಿತಾನೆನಿಸಿಪ್ರಜೆಗಳನುಸಲು । ಹುತ್ತಶ್ರೀ ಚೊಕ್ಕನಾಥೇಶಲಿಂಗವಸಭಜಿ ॥ ಸುತ್ತಭೂವರನಮನದಿಚ್ಛೆಯಲ್ಲಿರುತಲೀತೆರ ದಿಪಲಕಾಲವಾಗೆ ॥ ೫೬ ॥ ಇಂತುಭಕ್ತಿಜ್ಞಾನವೈರಾಗ್ಯಗಳುಹೆಚ್ಚೆ । ಲರಿತುಮಂತ್ರಿಯತನವನಕಲಸಂಪದ್ಭೋಗ । ಮಂತ್ರಿಸ್ಕರಿಸುತ್ತಸುವಿರಕ್ತಮಾಣಿಕ್ಯವಾಸನಾಚಾರ್ಯನಾದಂ ॥ ಭ್ರಾಂತಿಯುಳಿದ ಬ್ರಹ್ಮದೊಳುಬೆರತುಲಿಂಗವಂ । ಸಂತಸವಿಸೇರಿರೆಲ್ಕೊಂದುದಿನದಲ್ಲಿಭೂ । ಕಾಂತಪೂಜೆಗೆಬಂದು ಕುಳಿತಿರಲು ಶಿವನಪ್ರಿಯನಾಚಿಯೆಂಬಾಭಕ್ತೆಳು ॥ ೫೭ ॥ ಮಾರಹನಂಭಜಸಲ್ಕೆ ತಂದಶಿವಗೃಹಂ । ನಾರಿಯೊಳಪೊಕ್ಕುವಂದನೆಗೈದುನಿಂದಿರಲು । ವೀರಮಾಣಿಕ್ಯವಾಸಾಚಾರ್ಯನವ್ಯಗವವಳಲಾವಣ್ಯಬಲೆಗೆಸಿಲುಕಿ ॥ ಶೌರಿಸುತಬಾಧಗಾರಿದೆತನ್ನ ಪೆರಡತ್ತ್ಸಿ । ವಾರಿಜವಮುಚ್ಚಿ ಸುಯ್ಗರೆಯುಲಸಂಕಂಡ । ವೀರಶೈವರಿಗಿದೇಂಕಾರಣಮದೆನಲುಮಾಣಿಕ ವಾಸರಿಂತೆಂದರು ॥ ೫೮ ॥ ಅವನಿಪನೆಮಾಜಲೀತಕೆಕೇಳುಮನವಿರವ । ಶಿವನಪ್ರಿಯನಾಚಿಯುಲಕ್ಷಣವಿಲಕ್ಷಣಕೆ । ನವಿನುತಿಗಸೋಮನಡಿಗೆಸಂಗಸತ್ತಿಹರಿಣಾಕ್ಷಿ ಗೊಲಿದುಮನಸೋತೆನಿವಳ ॥ ಸವನಿಸುವತೆಂದಿಮದುವೆಯುಮಾಡಿಕೊಡಿಸಲು । ಶಿವನೊಳಿದುಕನ್ಯಕಾದಾನಫಲಕೊಡುವನೆನೆ । ಯುವತಿಯೊಸೊಡಂಬಡಿಸಿ ವೈವಾಹಿಕೋತ್ಸವವ ನರಸನತಿಜೀಗದಿಂದ ॥ ೫೯ ॥ ಇಂದುಧರಭಕ್ತರಲ್ಲರಕರಸಿಸುಸ್ಥಳದಿ । ಚಂದದಿಂಕಾಲ್ಗಂಣ ಮಂಟಪದವರಚಿಸುತ್ತ । ಕಂದಂಕೊರೆತೆಗಳಿಲ್ಲದಿರುವಶುಭಲಗ್ನದಲಿ ಮದುವೆಮಾಡಿಚನೆಗೈದು ॥ ಬಂದುನೆರದಿರ್ದ ಪುರಜನಪರಿಜನಕ್ಕೆಲ್ಲ । ಗಂಧಸುಮತಾಂಬೂಲವಸಾತ್ತಿನ್ನದಕ್ಷಿಣೆಗಳಿಂದಲಿಸಿಬರ ತೃಪ್ತಿಗೊಳಿಸಿವೈವಾಹಿಕೋತ್ಸವ ಶೀರ್ಚಿಮುದದಿಬಳಿಕ ॥ ೬೦ ॥ ನವರವ್ನತರವೆಪ್ಪದಿವ್ಯಗೃಹವನೆರಚಿಸಿ । ಸುವರ್ಣ ಮಾಣಿಕ್ಯ ವಾಸನಾಚಾರ್ಯನಂ । ಶಿವಪ್ರಿಯನಾಚಿಯನು ಶಯನ

ಕ್ಕೆಕಳುಹಲ್ಕೆ ಸಮ್ಮುಖವಿಕುಳಿತೀರ್ದ್ವರು । ಯುವತಿಯೊಳುಸ್ಮರಕೇಳಿ ಗುಜ್ಜ
ಗುಸವನಿತರೊಳು । ಶಿವತತ್ವನಾತ್ಮದೊಳು ಬೆಳಕಾಗಿತೋರಲ್ಕೆ । ಭವರಹಿ
ತ ವಿಷ್ಟಲಿಂಗವತೆಗದು ಮಂಚದೊಳು ಕುಳ್ಳಿರಿಸುತೆಲೆದೇವನೆ ॥ ೬೧ ॥ ಎಲ್ಲ
ವನುಬಿಟ್ಟುಸುವಿರಕ್ತನಾಗಿಹನನಗೆ । ಇಲ್ಲದಪ್ರಪಂಚಗಳ ನುಂಟುಮಾಡಿದೆ
ನೀನು । ನಲ್ಲಳೊಡಗೂಡಿಸುಖಿಮಿರುಯೆಂದಿನಿರುಳೆಂದು ಪೊರೆಯುಕ್ಕೆಪೋಗಲಿ
ತ್ತ ॥ ಚೆಲ್ಲೆಗಂಗಳ ಮನಸ್ತೃಪ್ತಿಗೋಸುಗವಾಗಿ । ಪುಲ್ಲಶರಸಂಪಳಿವಪುರು
ಷರೂಪವತಾಳಿ । ಪಲ್ಲವಾಧರೆಯುಪರಿಪರಿಬಂಧವಿಂನೆರದು । ಸುಖಿಸುತಿರೆಸೂ
ರ್ಯನುದಿಸ ॥ ೬೨ ॥ ಹೊರಗಿಹಕುಂಚ್ಚರಿಯುರಾತಮ್ಮಲಿಂಗವಂ । ಬರುವು
ದೆಲೆದೇವಪೂಜೆಯು ಸಮಯುವಾದುದನೆ । ತೆರಳಿಬಹಲಿಂಗವನು ಭಾವಿಸಬರ
ಲಿಸದೇ ಪಿಡಿಯುಲ್ಕೆಶರಣನೆದಂ ॥ ತರುಣೀಮಣಿಯೆಕೇಳುನನ್ನ ಲಿಂಗವಕರೆಯೆ
ಸೆರಗಾಂತುನಿಲಿಸಿದೇಕೆನೆ ಯೆಂದಳೆಲೆಕುಲ । ಚ್ಚರಿಯುರೇಯೆನ್ನ ಕಾಂತನತಡೆ
ದನಿನಗದ ಗೊಡವೆಯೆತಕೆಪೋಗೆನೆ ॥೬೩ ॥ ನನ್ನ ಲಿಂಗವನಾನು ಬಿಡನೆಂದು
ಶರಣನಿರೆ । ತನ್ನ ಗಂಡನತಾನುಕೊಡೆನೆಂದುತರುಣಿಯುರೆ । ಇನ್ನುನ್ಯಾಯುವ
ನವುಗೆ ಪೇಳ್ವಪಿರಿಯುರಬಳಿಗೆ ಪೋಪನಡೆಯೆಂದೀರ್ವರುಂ ॥ ನನ್ನುತಡಲಿಂ
ಗಸಹಮುವ್ವರುಪೋರವುಟ್ಟು । ಚಿನ್ಮಯುಚಿದಂಬರಪುರವಿಪರಬ್ರಸ್ಮನನು॥ ಸ್ವ
ನ್ನಿವಾಸದೊಳುಸರೆವಿಡಿದುರಾಜಿಸುತಿಪ್ಪ ತಿಲವೆಣಾಂಥರರೆಂಬುವ ॥೬೪॥ ಮೂ
ರುಸಾವಿರಗಣಂಗಳ ಬಳಿಗೆಬಂದುನಿ । ಸ್ವಾಂದದೊಳುತಮ್ಮವೃತ್ತಾಂತವನು
ಪೇಳೆಬ್ಬಂ । ದಾರಕಾರ್ಚಿತಲಿಂಗವನು ಕರದುಕೇಳ್ದರೆಲೆದೇವ ನೀನಾರಕಡೆ
ಗೆ ॥ ಮಾರಹರಪೇಳೆಂದು ಮುದವಿಂದಬೆಸಗೊಳಲು । ನಾರೀಗಪುರುಷರೂಪ
ಶರಣರಿಗೆಲಿಂಗದಾ । ಕಾರದೊಳುತೋರಿರ್ಪೆನೀರ್ವರನು ಬಿಡಲಾರನೆಂದು ಲಿಂ
ಗವುನುಡಿಯುಲು ॥ ೬೫ ॥ ದೇವನಿಮಗಿದರೊಳಗೆಪರಿಣಾಮ ವಾವುದೆನ । ಲಾ
ವುದಾಪರೆದವುಗೆ ಸಮುಸುಖವುಶರಿಭಾಗ । ನೀವುದಮ್ಮಿಚ್ಛೆಯುಂತೋರಿನಲ
ವರು ವಿಪರೀತಗಣನಾಥನೆಂದು॥ ಭಾವದೊಳುಬೆರಗಾಗಿ ದಿವಪಿಶರಣಗೆಲಿಂಗ
ನೀವನಿತೆಗಿರುಳುನೀಂ ಪುರುಷನಾಗಿರುಯೆಂದು । ಮಾವರನಕಳುಹಲ್ಕೆಬಂದು
ತನಾಲ್ಯಲಯುದ ಲಾವಿಧವಿನಡವುತಿರಲು ॥ ೬೬ ॥ ಲಿಂಗದಪ್ಪಣೆಯಿಂದ ಸಬ್ವ
ಬೋಗವಬಿಟ್ಟು । ಮಂಗಳಾತ್ಮಕನಾಗಿ ಮದಗಳಂಟನುಸುಟ್ಟು । ಲಿಂಗಪೂ
ಜೆಯುನೇಮದಿಂದಿರಲು ಸುವಿರಕ್ತಮಾಣಿಕಾಚಾರ್ಯರೆಂಬ ॥ ಸಾಂಗವಾಯಿ
ತುನಾಮವೆಂದು ಜನಪ್ರಗಳುತಿರ । ಲಿಂಗದೊಳುಮುಸ್ಪದಶಿಕ್ತಕುಗಿದನಾ
ಗೆ । ಲಿಂಗವುಜ್ಞನಸುದೆಕವನು ತಂದುಕೊಳಲಾರದಿರೆನೋಡಿಪರವೋತ್ಸವ॥
೬೭ ॥ ಬಾಲರೂಪಿಲಿಬಂದು ಯೆಲೆಕುಂಚ್ಚರಿಯುರೇ । ತೂಲಧಾರಿಲಿಂಗವುಜ್ಞನ
ಕಾದಕವನುನಿತ್ತ ॥ ನಾಲಸ್ಯವಿಲ್ಲದಾಂ ತರುವೆನುಗ್ರ... ವದನಾ...

ದೆನ ॥ ಲೋಲಗಣನಾಥನಿಗೆ ಪಾತವನುಪೇಳುತ್ತ । ಕಾಲಕಾಲವನರಿತುಸಾಷ್ಟವಿಧಪೂಜೆಯಲಿ । ಕಾಲಪಿತೃಕೋಟಿತೇಜೋಗಾತ್ರನಾತ್ರಿನೇತ್ರನಭಜಿಸುತೊಂದುದಿನದಿ ॥೬೮॥ ಓನ್ನ ಮಶ್ಶಿವಯೆಂದು ಪೇಳಲವನುಡಿಯದಿರೆ। ಲೋನ್ನ ಮಶ್ಶಿವಯೆನುತ ಮಸ್ತಕವಿನೋಡೆಯಲ್ಕೆ । ಛಿನ್ನವಾಗುತಲೋಡಿಪೋಗಿ ಕೋಣೆಯಕ್ಕ್ವಬಾಗಿಲಂ ಬಿಗಿದುಕೊಳಲು ॥ ಚಿನ್ನ ನೇ ಕೊಲುವವಿಲ್ಲೆನುತ ರಂಜಿಸಿಕದವ । ಭಿನ್ನಿಸಲು ಬಿಸಿಗಣ್ಣು ಜಡೆಗಂಗೆಪಂಚಮುಖ । ಪನ್ನಗಾಭರಣದಶಭುಜಶೂಲಡಮರುಗವು ನಂದಿಸಹರೂಪದೋರಿ ॥೬೯॥ ಹರನೊಲಿದು ಕೈಲಾಸಗಿರಿಗೆ ಕೊಂಡೊಯ್ದು ಕುಲ । ಚ್ಛರಿಯರುಶಿವಪ್ರಿಯ ನಾಚಿನಸಹಿತಾಕ್ಷಣದಿ । ಸುರದುಂದುಭಿಯುವೊಳಗೆ ಕುಸುಮವೃಷ್ಟಿಯು ಸುರಿಯೆಮೊರದ ಜನವೃಷೆವೃಷಿಯೆನೆ ॥ ಅರಸಿಕೇಳಿಂತಪ್ಪ ಶರಣಕುಲತಿಲಕಂಗ । ಪರಮೋಶಮೆಚ್ಛಿಸಾಯುಜ್ಯಪದವಿತ್ತನಂ। ದೊರೆದನಿಶಿವುಡವಿಂದಹರುಷವೆಗ್ಗಳಿಪಂತೆ ವರ ಜಗ್ಗಣಾಚಾರ್ಯನು ॥೭೦॥ ... ... *

ಗುರುವೆಜಯಪರಬ್ರಹ್ಮವಿರವೆಜಯಸದಮಲಾ । ದರವೆಜಯಸತ್ಯದಾಗರವೆಜಯನತಕಲ್ಪ । ತರುವೆಜಯಜಯತರುಣಿಶಶಿಕೋಟಿನಿಭಗಾತ್ರರುಚಿಯೆಜಯಭಕ್ತಜನರ ॥ ಪ್ರಾಣವೆಜಯಭವಪಾಶಹರವೆ ಜಯಮುಕ್ತಿಪಥ। ವರವೆಜಯ ವಭಯಕರವೆುರವೆಜಯಜಯಪರಾ । ತ್ಪರವೆಜಯಪರಮಳಿಯಮಲ್ಲೇಶಮದ್ಗುರುವೆ ಮನದಿಷ್ಟವಿತ್ತು ಸಲಹೈ ॥ ... *

ಹದಿನೆಂಟನೇ ಸಂಧಿ ಮುಗಿದುದು.

—(ಹದಿನೆಂಟನೆಯ ಸಂಧಿ ಪ್ರಾರಂಭವು.)—

ಸೂಚನೆ॥ ಶಿಂಗಳೆ=ಚಂದ್ರ, ಪಿಂಗಳೆ=ಸೂರ್ಯ, ಇಂಗಳೆ=ಅಗ್ನಿ, ಭೃಂಗಶಿಂಜಿನಿ=ಕಾಮ, ಕಂಗಳಸಹಸ್ರ=ಇಂದ್ರ, ತಪ್ತಕಾಂಚನ=ಪುಟವಿಟ್ಟಭಂಗಾರದ ಆಭರಣಕಾಂತಿಯುಳ್ಳ, ಶಿರೋಜ=ಕೇಶಗಳುಳ್ಳವನು ॥೨॥ ಪಾದೋದಕ=ಚರಣತೀರ್ಥ ॥೩॥ ವಿವಹ=ವಿವಾಹ, ತಣದ್ಗಿರವೊಗದವಳ ಚಂದ್ರಮುಖಿಯು, ಉದ್ಯಾನ=ತೋಟ ॥೪॥ ಜಿತಕಾಮ=ಶಿವ, ಯತಿ=ವಿರಕ್ತ ॥೫॥ ತೇರು=ರಥ, ಉರಿದು=ಸಿಟ್ಟಾಗಿ, ಹೆಮ್ಮೆ=ಗರ್ವ ॥೬॥ ಮಂದಸ್ಮಿತ=ಕಿರುನಗೆ ॥೭॥ ಬೆರತು=ಕೂಡಿ, ಜಾವ=ಯಾಮ ॥೮॥ ಮಂಡಲಿಕ=ಮಂಡಲಾಧಿಪತಿ ॥೯॥ ಏಕಾಂತ=ರಹಸ್ಯ, ತುಪ್ಪುಳುನಾಸು=ತೂಲಿಕಾತಲ್ಪ ಅಂತಕಾಂತಕಾಭರಣ=ಸರ್ಪ ॥೧೦॥ ಕಾಕಕೋರಗ=ಕರಿಯಹಾವು ॥೧೧॥ ಸೋಮನ=ಯೋಮನ, ಎರಡು ಹೆಸರುಗಳುಂಟು ॥೧೨॥ ಶವ=ಹೆಣ, ಬಾಧೆ=ತ್ರಾಸು, ಬದ್ಧಾಂಜಲಿ=ಕೈಜೋಡಿಸಿಕೊಂಡು ॥೧೩॥ ಮೂಕುಹದ=ಮ

ಸ್ಮೃಥ ॥೧೪॥ ಭೂಧವ=ರಾಯ, ವೇದಘೋಟಕ=ಅಪ್ಪಾಯತುರಂಗ ಶಿವ ೧೫॥ ಅನುರಾಗ=ಅಕ್ಕರೆ ॥೧೬॥ ಕರ್ಣಿಕೆ=ಕಮಲಮಧ್ಯ ॥ ॥೧೭॥

—(ಕಥಾಸಂಗ್ರಹ ವಚನವು.)—

ಗೋರಾಂಪಪುರದರಸು ಸಾರಂಗರಾಯನು ಮತ್ತೊರ್ವ ರಾಜಪುತ್ರಿಯಂ ಮದುವೆಯಾಗಿ ಬರುವದಾರಿಯಲ್ಲಿ ಪಾಲ್ಕುರಿಯ ಸೋಮನಾರಾಧ್ಯರಂ ಕಂಡು ನಮಿಸಲು ಆತಂ ಸುಮ್ಮನಿರಲ್ಕೆ, ರಾಯನು ಆಧಿಕ್ಷೇಪಗೊಳಲು ನಿನಗೆ ನಾಳೆ ಮರಣವಾಗುವುದೆಂದುಪೇಳಿದ ಸೋಮನಾರ್ಯರಂಪಳಿದು ಮನೆಗೆಬಂದ ರಾಯನು ಸರ್ಪದಷ್ಟನಾಗಿ ಸಾಯಲು, ಎಲ್ಲರೂ ಅರಸಿನ ಹೆಣವಂ ಸೋಮನಾರ್ಯರಬಳಿಗೆ ಕೊಂಡುಪೋಗಿ ಪ್ರಾರ್ಥಿಸಲು ಆತಂ ಜಂಗಮರಂ ಕರೆತರಿಸಿ ಪಾದೋದಕವಂ ಮಾಡಿಸಿ ಅರಸಿನಮೇಲೆ ತಳಿಯಲು ರಾಯನು ಬದುಕಿ ನೂರುವರ್ಷ ರಾಜ್ಯವಾಳಿ ಕೈಲಾಸಕ್ಕೆ ಪೋದನು ... *

ಕುಂಭಿನಿ=ಭೂಮಿ, ಕೂಚತ=ಕುತ್ಸಿತ, ಜಂಬು=ಜಂಬೂ, ಕಂಬಳಾಶ್ವತರೆ ಶ್ರುತಿಕುಂಡಲ=ಕಂಬಳಾಶ್ವತರಗಳೆಂಬ ಸಾಮಶಾಖೆಗಳು ಸರ್ಪರೂಪಗಳಾಗಿ ಶಿವನಕಿವಿಯಲ್ಲಿ ಕುಂಡಲಾತ್ಮನಾಗಿಯಿದ್ದು ಗಾನಮಾಡುತ್ತಿರುವವೆಂದು ತಾತ್ಪರ್ಯವು. ಅಷ್ಟಾವರಣ=ಪೂರ್ವೋಕ್ತ ॥೧೮॥ ಕಾಶಿಯತೀರ್ಥಮಣಿಕರ್ಣಿಕೆ ॥೧೯॥ ಭಾಗಿರಥಿ=ಭಾಗೀರಥಿ ॥ ೨೦ ॥ ಕಕುಭವಸನ=ಕಕುಬ್ವಸನ, ಸೇಚನ=ಅಭಿಷೇಕ ॥೨೧॥ ತ್ರಾಸು=ತುಲಾ ॥೨೨॥ ಬಲ=ತೂಕವುಳ್ಳದ್ದು ॥೨೩॥ ಕೇರಿ=ಬೀದಿ ॥೨೪॥ ಭವ=ಸಂಸಾರ, ಭಕ್ತ=ಲಿಂಗವಂತ ಸಾಕಾರ್ಯ=ಸಹಕಾರಿ ॥ ... ... ॥೨೫॥

—(ಕಥಾಸಂಗ್ರಹ ವಚನವು.)—

ಆಂಧ್ರದೇಶದಲ್ಲಿ ಪುಲಿವಿಂದ್ರವೆಂಬ ಗ್ರಾಮದೊಳಗೆ ಕಾಚಿರಾಜಯ್ಯನೆಂಬ ಶಿವಭಕ್ತನು ತೀರ್ಥಗಳಲ್ಲಿ ಗಂಗಾತೀರ್ಥವೇ ಅಧಿಕವೆಂದು ಪರವಾದಿಗಳು ಓದಿದ ಪುರಾಣವಂ ಕೇಳಿ ಅದಕ್ಕಿಂತಲೂ ಜಂಗಮ ಪಾದೋದಕವೇ ಅಧಿಕವೆಂದು ವಾದಿಸಿ ಹೆಚ್ಚುತೂಕ ಪರೀಕ್ಷೆಯಂ ತೋರಿಸಿ, ಅದರಗುಣವೇನೆಂದು ಪರವಾದಿಗಳು ಕೇಳಿದ್ದಕ್ಕೆ ನಂಬಿದವರಿಗೆತಣುವು, ನಂಬದವರಿಗೆ ಉಷ್ಣವೆಂದು ಹೇಳೆ ನಾವು ನಂಬಲಿಲ್ಲ ನಮಗುಷ್ಣವ್ರಾ ಎಂದು ಕೇಳುತ್ತಲೂ, ಪಾದೋದಕವನ್ನು ಚಲ್ಲ ಪರವಾದಿಗಳ ಕೇರಿಗಳನ್ನು ಸುಡುತ್ತಲೂ, ಅವರು ನಂಬಿಬಂದಮೇಲೆ ದೀಕ್ಷೆಕೊಟ್ಟು ಭಕ್ತರುಮಾಡಿ, ಈತೆರವಿ ಪಾದೋದಕಮಹಿಮೆಯಂ ತೋರಿ ಕಾಚಿರಾಜಯ್ಯನು ಇಷ್ಟಲಿಂಗದಲ್ಲಿ ಐಕ್ಯನಾದನು.

ಲೀನ=ಅಡಗಿದ್ದು, ತನುತ್ರಯ=ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ ॥೨೬॥ ಷೋಡಶುಪಚಾರ=ಷೋಡಶೋಪಚಾರ, ಸಂಸ್ಕೃತ ಸಮಾ

ಸದಲ್ಲಿ ಕನ್ಯಾದಸಂಧಿಯು ಅಪೂರ್ವವಾಗಿದೆ, ಸಂಹಿತೆಯಲ್ಲಿ ವಿಸಂಧಿಯಾಗಲಿ ದೇನಚ್ಚರಿಯು ||೨೬|| ಖದ್ಯೋತ=ರವಿ ||೨೮|| ಆಸಾರ=ಸಾ ||೨೯|| ಅಪ್ರತಿಮ=ಸಮಾನವಿಲ್ಲದ ||೩೦|| ಶಿರಸಗ್ರಿಯು=ಕರಿಶಿರಯು ಪ್ರಿಯ ಇತ್ಯಾದಿಗಳು ಅಪೂರ್ವಗಳು, ಶರಿದ=ಇತ್ಯಾದಿಗಳು ಪರಮಸಾಧು ಪ್ರಯೋಗಗಳು, ೩೧ || ಬಸ=ವಶ, ||೩೩|| ಕೃತ್ಯ=ಕರ್ತವ್ಯಕರ್ಮ, ಅದಿತ್ಯ=ಆದಿತ್ಯಪತ್ರ ||

—(ಕಥಾಸಂಗ್ರಹ ವಚನವು.)—

ಕನಕಾದ್ರಿಯಲ್ಲಿ ಘಂಟಾಕರ್ಣನೆಂಬ ಭಕ್ತನು ವೀರಶೈವಾಚಾರನಿಷ್ಠಾಗರಿಷ್ಠನಾಗಿ ಅನ್ಯಶಬ್ದ ಕಿವಿಗೆ ಕೇಳದಂತೆ ಘಂಟೆಗಳಂ ಕಟ್ಟಿಕೊಂಡಿರಲು ಆತನ ತಪೋವನದಲ್ಲಿ ತರುಲತಾ ಪುಷ್ಪಫಲ ಪಕ್ಷಿಪಶ್ವಾದಿಗಳಿಗೆ ಕೂಡಿ ಶೀತೋಷ್ಣಾದಿ ಯಾವಬಾಧೆಗಳೂ ಇಲ್ಲದೆ ಇರ್ದುದು. ಆತನುಪೂಜಿಸಿದ ಶಿವನಿರ್ಮಾಲ್ಯ ಪುಷ್ಪಗಳು ಒಣಗಿದ್ದೆಲ್ಲ ಒಂದುದಿನ ಬಿಸಿಲುಕಾಲದೊಳಗೊಂದು ಪುಷ್ಪವು ಬಾಡಿಯಿರಲು ಆ ಮುನಿಯು ಸೂರ್ಯನನ್ನು ಕುಷ್ಠರೋಗಿಯಾಗೆಂದು ಶಪಿಸಲ್ಕೆ, ರವಿಯು ಹೆದರಿ ನಿಶಾಪವಂ ಬೇಡಲು, ಮನುಹರಗಣೇಶನ ಪಾದೋದಕದಿಂದ ಶುದ್ಧನಾಗೆಂದನು. ಬಳಿಕ ಸೂರ್ಯನು ಕುಷ್ಠಯಾಗಿ ಕಾಶೀಕ್ಷೇತ್ರಕ್ಕೆ ಬಂದು ಬಾಲಾರ್ಕಲಿಂಗವಂ ಭಜಿಸಿ ತಪವಂಗೈಯ್ಯೆ, ಹರನು ಪ್ರತ್ಯಕ್ಷವಾಗಿ ಘಂಟಾಕರ್ಣಗಣನಾಥ ನೊರೆದಂತೆ ಮನುಹರಗಣೇಶ್ವರನ ಪಾದೋದಕವಂ ಸೇವಿಸೆನಲು ಆದಿತ್ಯನು ಅಂತುಗೈದು ಚರಪಾದೋದಕದಿಂದ ಕುಷ್ಠವಿಮುಕ್ತನಾಗಿ ಯಥಾಪೂರ್ವವಾಗಿ ನಿಂತನು. ಆದುದರಿಂದ ಜಂಗಮಪಾದೋದಕವೇ ಘನವೆಂದರುಹಿ ಜಕ್ಕಣಾಚಾರ್ಯನು ಪ್ರಭುಢರಾಯಂಗೆ ಮತ್ತೊಂದು ಕಥೆಯಂ ಪೇಳುವನೆಂತೆನೆ;— ... *

ತನುಜಾತೆ=ಮಗಳು, || ೩೪ || ಪುರುಷಾಲಯ=ಗಂಡನಮನೆ,||೩೫|| ಜಿನ್ನ=ಜನ, ಶ್ರಮಣ=ಜೈನ ಪೂಜೆ, ಗೂನತಿ=ಪೂಜೆಗೆ ಊನತೆ ||೩೬|| ಪರಾತ್ಪರ=ಉತ್ಕೃಷ್ಟಕ್ಕಿಂತಲು ಉತ್ಕೃಷ್ಟ, ಗೌರವ=ಗುರುಗೌರವನು || ೩೭ || ಕಕುಬ್ವಸನ=ದಿಂಗಂಬರಿ, ಚಕಿತ=ಭೀತ, || ೩೮ || ಹರಿಣ=ಜಿಂಕೆ, ಪ್ರಾಣ=ಪ್ರಾಣ || ೩೯ || ನಳಿನ=ತಾವರೆ, ಛಳಿವೆದ್ದಣುಗಿ=ಪಾರ್ವತಿ, ಅಣ್ಣ=ಗಂಡ, || ೪೦ || ಕಾಚಿರ್ಣನ್ನ=ಕಬ್ಬಿಣ, ||೪೧|| ಲೂಣೆಯ ಲೂನತೆ, ಧವ=ಗಂಡನು, ಕೃತಕ=ಕಲ್ಪಿತ ಬಾಧಕ ||೪೨|| ಆಸ್ಥಾನಸಭೆ, ದ್ವಂದ್ವಕರ=ಕರದ್ವಂದ್ವ, ಸಂದೋಹ=ಗುಂಪು. ||೪೩ || ಸಂಘ=ಗುಂಪು ಜಿನ್ನರ=ಜೈನರ, ಗೋಳಿಟ್ಟು=ಸರಿಯಾದ ಉತ್ತರಹೇಳಲಾರದೆ ಅತ್ತು, ಗಸಕಲ್ಕೆ=ಗರಟಲು, ಶೀಮಂತವಣಿ=ಶ್ರೇಷ್ಠನು ಶ್ರುತಿ=ನಾಲ್ಕು ಶ್ರುತಿ [illegible] ಉಪನಿಷತ್ತು; ೧೦೮,ನಾಥ=ಸನ್ನ, ಸಂಬುಧಸ್ಥಾನಿ [illegible]

ವಾರವನ್ನು ಮಾಡಿದ ಅವತಾರಪುರುಷನೆಂತಲೂ ಶೈವನೆಂತಲೂ ವೀರಶೈವನಲ್ಲವೆಂತಲೂ, ಪಂಡಾರ ಮಠಗಳತಿಗಳರನ್ನು ವರು ॥ ೪೪ ॥ ಕೂನ=ಬೆನ್ನಿನುಬ್ಬುಡೊಂಕವನ್ನು ॥೪೫॥ ಕುಧವ=ರಾಯನೇ, ಪತ್ರ=ದಸ್ತೈವು॥೪೬॥ ಅಷ್ಟಾವರಣ=ಗುರುಲಿಂಗಜಂಗಮ ಮಂತ್ರ ಭಸ್ಮರುದ್ರಾಕ್ಷ ಪಾದೋದಕ ಪ್ರಸಾದಗಳು, ೮, ರನ್ನ=ರತ್ನಸ್ವರೂಪಗಳು. ... *

—(ಕಥಾಸಂಗ್ರಹ ವಚನವು.)—

ಕರವ್ರೂರು ಅಥವಾ ಕರೂರು ಅಂದರೇ ಕರವೀರಪುರವನ್ನು ಆಳುವ ರಾಜೇಂದ್ರಚೋಳರಾಯನ ಮಗಳಾದ ಮಂಗಾಯಕ್ಕರಸಿಯನ್ನು ಪಾಂಡ್ಯದೇಶವನ್ನಾಳುತ್ತಿರುವ ಕೂನಪಾಂಡ್ಯರಾಯನು ಮದುವೆಯಾಗಿ ಮಧುರೆಯಲ್ಲಿ ರಾಜ್ಯವಾಳುತ್ತಿದ್ದನು, ರಾಜೇಂದ್ರ ಚೋಳನು ಶೈವನಾದರಿಂದ ತನ್ನ ಮಗಳಾದ ಮಂಗಾಯಕರಸಿಗೆ ಶಿವಾಚಾರಕ್ರಮವನ್ನು ತಿಳಿಸುತ್ತಿರು ಬಗ್ಗೆ ಕುಲಚ್ಚರಿಯರೆಂಬ ಶಿವಯೋಗಿಗಳನ್ನು (ಇವರೇಮಾಣಿಕ್ಯವಾಸಗರು) ಕಳುಹಿಸಿಯಿರಲು ಅವರು ರಾಜಪೂಜಿತರಾಗಿ ಭಕ್ತರಿಗೆ ಶಿವಧರ್ಮವಂ ಬೋಧಿಸುತ್ತಿದ್ದರು, ಆಕೆಯಗಂಡನಾದ ಪಾಂಡ್ಯರಾಯನು ಜೈನಮತದಲ್ಲಿ ನೆಚ್ಚಿಕೆ ಯುಳ್ಳವನಾಗಿ ಜಿನ್ನೇಂದ್ರದೇವರನ್ನು ಭಜಿಸುತ್ತಿರ್ದನು ಹೀಗೆವಿರುದ್ಧ ಮತಾಚರಣಶೀಲರಾದ ಗಂಡಹೆಂಡರಿಗೆ ಮತಕಲಹವುಂಟಾಗಿ ಜೈನಮತವನ್ನು ಗೆದ್ದು ಶೈವಮತವನ್ನು ಸಾಧಿಸಿಕೊಳ್ಳದೇ ಹೋದರೆ ನಿನ್ನನ್ನು ಕಡಿದು ಹಾಕುವೆನೆಂದು ರಾಯ ಸಿಟ್ಟುಮಾಡಲಾಗಿ ಆಕೆಯು ಕುಲಚ್ಚರಿಯೋಗಿಯಂ ಕಂಡು ಜೈನರನ್ನು ಗೆದ್ದು ಶಿವಸಮಯವಂ ಉದ್ಧರಿಸಬೇಕೆಂದು ಬಿನ್ನೈಸಲು, ಆತನು ತಿರುಜ್ಞಾನ ಸಂಬಂಧಮೂರ್ತಿಸ್ವಾಮಿಯೆಂಬ ಮಹಾಸಿದ್ಧರಂ ಕರತರಲು ರಾಣಿಯು ಅವರಂಬರಮಾಡಿಕೊಂಡು ಸತ್ಕರಿಸುತ್ತಿರ ಜೈನರಿಗೆ ಕಾಲಶೀಲಿರಲೆಂದು ಅಕಾಶವಾಣಿ ನುಡಿಯುತಲೂ ಕುಲಚ್ಚರಿಯರುಂ ಕಬ್ಬಿಣದಿಂದ ೮೦೦ ಸಾವಿರ ಶೂಲಗಳನ್ನು ಮಾಡಿಸಿ ಹೊಳೆಯುದಡದಲ್ಲಿ ನಡಸಿ ಇವುಗಳಿಗೆಲ್ಲಾ ಜೈನರುಬರಬೇಕಾಗುವುದೆಂದು ನಿರೀಕ್ಷಿಸುತ್ತಿರ್ದನು. ಬಳಿಕ ರಾಯನು ಜೈನಾಧಿಕರಂ ಕರೆಯಿಸಲು ಶ್ರವಣರಿಗೂ ಶಿವಶರಣತಿರು ಜ್ಞಾನಸಂಬಂಧಿ ಮೂರ್ತಿ ಸ್ವಾಮಿಗಳಿಗೂ ಮತವಾದಕ್ಕೆ ಆರಂಭವಾಗಿ ಬಹುದೂರ ತರ್ಕನಡೆದುನಿಗಮಾಗಮ ಸ್ಮೃತಿಪುರಾಣ ಶಾಸ್ತ್ರೋಪನಿಷತ್ಪ್ರಮಾಣ ಯುಕ್ತಿಗಳನ್ನು ಉದಾಹರಿಸಿ ಶೈವಪಕ್ಷವೇಜಯಕ್ಕೆಬರಲು ಜೈನರು ಉತ್ತರಹೇಳಲಾರದೆ ಸೋಲಾಗಿ ಪ್ರತ್ಯಕ್ಷ ಮಹಿಮೆಯಂ ತೋರಬೇಕೆನ್ನುತಲೂ ಕೂನಪಾಂಡ್ಯರಾಯನು ಜನ್ಮಪ್ರಭೃತಿಯಾಗಿ ತನ್ನ ಬೆನ್ನಿನಮೂಳೆಯು ಉಬ್ಬಿಕೊಂಡು ಡೊಂಕಾಗಿ ಗಂಟುಕಟ್ಟಿ ಕೂನುಬೆಳೆದು ವಿಕಾರನಾಗಿರುವನನ್ನು ಜೈನವಾದಿಗಳು

ಸರಿಸಿ ನನ್ನನ್ನು ಚೆಲುವನನ್ನಾಗಿ ಮಾಡುವರೋ ಆ ಮತವನ್ನು ನಂಬಿ ಇತರರನ್ನು ಶೂಲಕ್ಕೆ ಹಾಕಿಸುವೆನೆನ್ನುತಲು ಜೈನರು ಆ ಕೆಲಸ ಆಗತಕ್ಕದ್ದಲ್ಲವು ಶೈವರಿಂದಾಗದಿದ್ದರೆ ಅವರನ್ನು ಶಿಕ್ಷಿಸಬೇಕು, ಅವರಿಂದಾದರೆ ನಾವು ಶಿಕ್ಷಿಸಲ್ಪಡುವೆವು ಎನ್ನುತಲೂ ರಾಯನು ದಸ್ತೈವಜುಗಳಂ ಬರೆಯಿಸಿಕೊಳ್ಳುತಲೂ ತಿರುಜ್ಞಾನಸಂಬಂಧರ ಆಜ್ಞಾನುಸಾರ ಮಂಗಾಯಿಕರಸಿಯು ಶಿವಭಕ್ತಪಾದೋದಕದಿಂದ ಭಸಿತವಂ ಕಲಿಸಿ ರಾಯನಬೆನ್ನಿಗೆ ಹಚ್ಚಿಸಿ ಮೂರು ಗುದ್ದುಗಳಂ ಗುದ್ದಿಸುತಲೂ ಅರಘಳಿಗೆಯೊಳಗಾಗಿ ಡೊಂಕುತಿದ್ದಿ ಗೂನಿಲ್ಲದೆ ರಾಯನು ಸುಂದರಾಂಗನಾಗಿ ಶೈವವಂನೆಚ್ಚಿ ಜೈನರನ್ನು ಶೂಲಗಳಿಗೆ ಹಾಕಿಸಿಕೊಂದು ಅರಸಿಯೊಡನೆ ಶಿವಭಕ್ತನಾಗಿ ಅಷ್ಟಾವರಣ ನಿಷ್ಠೆಯೊಳಗಿದ್ದು ಕಡೆಗೆ ಮುಕ್ತನಾದನು ಭಕ್ತಪಾದೋದಕಪ್ರಭಾವವು ಇಂಥದ್ದಾಗಿರುವುದು

ಜಂಭಾರಿ=ಇಂದ್ರ, ||೪೮|| ತ್ರಿದಶ=ದೇವತೆಗಳು, ಅಮರಾವತಿ=ಸ್ವರ್ಗ, ಪಾವುಗೆ=ಪಾದರಕ್ಷೆ ||೪೯|| ಗಿರಿವೈರಿ=ಇಂದ್ರ, ಬರ=ದುರ್ಭಿಕ್ಷ||೫೦ ಸುಂದರಪಾಂಡ್ಯನೇ ಕೂನಪಾಂಡ್ಯನು, ಚೊಕ್ಕನಾಯನಾರ್=ಪಾಂಡ್ಯನ ಮಂತ್ರಿ, ||೫೧|| ಕಾಣಿ=ಕಾಸು, ಜಂಬುಕ=ನರಿ ||೫೨|| ಮಣಿದು=ಬೊಗ್ಗಿ, ೫೩|| ದುರಿತ=ಪಾಪ, ಕುಲಚ್ಚಿರಿಯರು=ಶಿವಶರಣನು [ಚೊಕ್ಕಪಾಂಡ್ಯನೆಂತಲೂ, ಕೂನಪಾಂಡ್ಯನೆಂತಲೂ, ಸೌಂದರಪಾಂಡ್ಯನೆಂತಲೂ ಒಬ್ಬನಿಗೆ ಮೂರು ಹೆಸರುಗಳುಂಟು] ಕುಲಚ್ಚಿರಿಯೆಂಬ ಮಂತ್ರಿಯೇ ಮಾಣಿಕ್ಯವಾಸಸ್ವಾಮಿಯಾಗುತಾನೆ ||೫೪|| ತೆತ್ತೀಸ=೩೩, ಬತ್ತೀಸ=೩೨, ನಿರ್ಜರೇಶ-ದೇವರಾಜ ||೫೫|| ಕದನ=ಯುದ್ಧ, ಗೀರ್ವಾಣಪತಿ=ದೇವೇಂದ್ರ, || ೫೬||

—(ಕಥಾಸಂಗ್ರಹ ವಚನವು.)—

ಕೇರಳದೇಶದ ಮಹಾದೇವಿಪುರದ ಚೇರರಾಯನು, ಚೋಳದೇಶದ ಕರವೀರಪುರದ ರಾಜೇಂದ್ರಚೋಳರಾಯನೂ, ಪಾಂಡ್ಯದೇಶದ ಮಧುರಾಪುರದ ಕೂನಸುಂದರಪಾಂಡ್ಯ ರಾಯನೂ [ಇವನೇ ಚೊಕ್ಕಪಾಂಡ್ಯ] ಮೂವರೂ ಅನ್ಯೋನ್ಯ ಮಿತ್ರರಾಗಿ ಶಿವಾಚಾರನಿಷ್ಠೆಯಿಂ ಯೋಗಸಿದ್ಧರಾಗಿ ಮಹಿಮೆಗೊಂಡು ವಿನೋದವಾಗಿ ವರಲಬ್ಧಗಳಾದ ರೆಕ್ಕೆಗಳುಳ್ಳ ದಿವ್ಯಾಶ್ವಗಳನ್ನು ಏರಿ ಅಂತರಿಕ್ಷಕ್ಕೆ ಹಾರಿ ದೇವಲೋಕಗಳನ್ನು ಸಂಚರಿಸಿ ನೋಡಿಬರುತ್ತಿದ್ದರು. ಒಂದುದಿನ ಸ್ವರ್ಗದಿಂ ಬರುವಾಗ ಇಂದ್ರಂಗೆ ನಮಸ್ಕರಿಸದೆ ಬರಲಾಗಿ ಅವರ ಗರ್ವವಂ ಮುರಿಯಲ್ಕೆಂದು ಇಂದ್ರನು ತನ್ನ ಪಾದರಕ್ಷೆಗಳಂ ಸ್ವರ್ಗದ್ವಾರ ಗೋಪುರಕ್ಕೆ ಕಟ್ಟಿಸಲು ಮೂವರೂ ಅದಂ ಕಂಡು ಬಾಗಲಿನಲ್ಲಿ ಹೋಗದೇ ಕುದುರೆಗಳನ್ನು ಗೋಪುರದಮೇಲೆ ಹಾರಿಸಿಕೊಂಡು ಹೋಗಿ ಬರಲಾಗ ಇಂದ್ರನು ಸಿಗಿಗೊಂಡು ಆ ಮೂರುದೇಶಗಳಿಗೂ ಮಳೆಯಿಲ್ಲದೇ ದ್ವಾದಶ [illegible]

ಕ್ಷಾಮಬರುವಂತೆ ಮಾಡುತಲೂ, ಪಾಂಡ್ಯರಾಯನು ತನ್ನ ಮಂತ್ರಿಯಾದ ಚೊಕ್ಕನಾಯಕನಾದ ವಶಕ್ಕೆ ಬಹುದ್ರವ್ಯವಿತ್ತು ಇಂದ್ರನಮೇಲೆ ಯುದ್ಧಕ್ಕೆ ಕೋಟ್ಯಶ್ವಂಗಳಂ ಸಿದ್ಧಪಡಿಸೆನ್ನುತಲೂ ಆತನು ಆ ದ್ರವ್ಯವೆಲ್ಲವನ್ನು ಲಿಂಗ ಜಂಗಮಾರ್ಚನೆಗೆ ವಿನಿಯೋಗಿಸಿಬಿಟ್ಟು ಇಂದ್ರನು ಯುದ್ಧಕ್ಕೆ ಬರುವಾಗ್ಗೆ ಕೋಟಿನರಿಗಳಂ ಹಿಡಿತರಿಸಿ ಅವುಗಳಮೇಲೆ ಶಿವಜಂಗಮ ಪಾದೋದಕವಂತೆಳೆಯಲು ಅವು ರೆಕ್ಕೆಗಳುಳ್ಳ ದಿವ್ಯಾಶ್ವಗಳಾಗಲ್ಕೆ, ಪಾಂಡ್ಯರಾಯನು ಬಲವಂತನಾಗಿ ಚೇರಚೋಳ ರಾಯರೊಂದಿಗೆ ಸೇರಿ ಇಂದ್ರನನ್ನು ಹೊಡದೋಡಿಸಲಾಗಿ ಬೃಹಸ್ಪತ್ಯುಪದೇಶದಿಂದ ಶಿವಭಕ್ತರಿಗೆ ಶರಣುಮಾಡಿ ವಿರೋಧವಂ ಬಿಟ್ಟು ಮಳೆಸುರಿಸುತ್ತ ಸ್ವರ್ಗಕ್ಕೆ ಪೋದನಾದ್ದರಿಂದ ಜಂಗಮದ ಪಾದೋದಕವು ಅಷ್ಟುಮಹಿಮೆಯುಳ್ಳದ್ದೆಂದು ತಿಳಿಯಲಾಯಿತು. ... *

ಪಲ್ಲಟ=ವಿಪರೀತ, ಚೊಕ್ಕನಾಥ=ಸುಂದರೇಶ್ವರ ||೫೭|| ಲಿಂಗಸುಂದರೇಶ್ವರ, ಭೂಕಾಂತ=ಕೂನಪಾಂಡ್ಯರಾಯ ||೫೮|| ಶೌರಿಸುತ=ಮನ್ಮಥ, ಆರದೆ=ತಡೆಯಸಾಲದೆ, ಸುಯ್=ಶ್ವಾಸವಾಯು || ೫೯ || ಮಾಜದೆ=ಮುಚ್ಚದೆ ||೬೦|| ಸುಸ್ಥಳ=ದ್ವಾದಶಾಂತಕ್ಷೇತ್ರ, [ಮಧುರ] ||೬೧|| ಆತ್ಮ=ಮನಸ್ಸು, ಭವ=ಸಂಸಾರ ||೬೨|| ಪ್ರಪಂಚ=ಸಂಸಾರ ಪಲ್ಲವ=ಚಿಗುರು ||೬೩|| ಭಾಮೆ=ಹೆಂಗಸು ||೬೪|| ತಿಲ್ಲವೇದೀಧರರು=ತಿಲ್ಲವೇಣೀ ಧರರು, [ಚಿದಂಬರದೀಕ್ಷಿತರು ||೬೬|| ಪರಿಣಾಮ=ಇಷ್ಟ, ವಿಪರೀತ=ವತ್ಯಸ್ತ, ದಿವದಿ=ಹಗಲಿನಲ್ಲಿ, ಉಮಾವರನ=ಶಿವನನ್ನು ||೬೭|| ಸಾಂಗ=ಪೂರ್ಣ, ಮಜ್ಜನ-ಅಭಿಷೇಕ ||೬೮|| ಕಾಲಪಿತ್ರ=ಸೂರ್ಯ, ಗಾತ್ರ=ಶರೀರ ||೬೯|| ಸೋಣೆಯಲ್ಕೆ=ತಿವಿಯಲು, ಕೋಣೆಯ=ಮೂಲೆಮನೆಯನ್ನು, ರಂಜಿಸಿ=ಒಪ್ಪಿಸಿ, ಭಿನ್ನಿಸಲು=ತೆರೆಯಲು || ೭೦ || ತಿಲಕ=ಶ್ರೇಷ್ಠ, ನೆಗಳಿಪ=ಹೆಚ್ಚುವ, ಇತ್ತು=ಕೊಟ್ಟು || ... ... ||೭೧||

—(ಕಥಾಸಂಗ್ರಹ ವಚನವು.)—

ಮಧುರೆಯಲ್ಲಿ ಸುಂದರಪಾಂಡ್ಯರಾಯನು ಕುಲಚಕ್ರಿಯೆಂಬ ಮಂತ್ರಿಯೊಡನೆ ರಾಜ್ಯವಾಳುತ್ತಿರುವಾಗ ಮಂತ್ರಿಯು ಚೊಕ್ಕನಾಥಲಿಂಗವಂ ಭಜಿಸಿ ವಿರಕ್ತನಾಗಿ ಮಾಣಿಕ್ಯವಾಸರೆಂಬ ಹೆಸರುಪಡೆದು ಸುಂದರೇಶ್ವರ ಸನ್ನಿಧಿಯಲ್ಲಿ ತಪಸ್ವಿಯಾಗಿದ್ದರೆ ಶಿವದರ್ಶನಕ್ಕೆ ಬಂದ ಶಿವಪ್ರಿಯ ನಾಚಿಯೆಂಬವಳನ್ನು ಕಾಮಿಸಲಾಗಿ ಘೋರೆಯು ಅವಳನ್ನು ಈತಂಗೆ ಮದುವೆಮಾಡಿಸಿ ಕೊಡುತಲೂ, ರಾತ್ರಿ ಮಂಚವನೇರೆ ಮನವು ಕಾಮೋನ್ಮುಖವಾಗಲಾಗಿ ವಿವೇಕದಿಂದನುಗ್ರಹಿಸಿ ತನ್ನ ಇಷ್ಟಲಿಂಗವನು ಮಂಚದಮೇಲಿರಿಸಿ ಓ ಲಿಂಗದೇವರೇ! ವಿರಕ್ತನಿಗೆ ಕಾಮವನ್ನು ಏಕೆಕೊಟ್ಟೆ ಅದನ್ನು ನೀನೇ ಅನುಭವಿ

ಸೆಂದು ಹೊರಕ್ಕೆ ಬರುತಲೂ, ಆ ಲಿಂಗವೇ ಪುರುಷರೂಪದಿಂದ ಆರಾತ್ರಿ ನಾಚಿಯಬಳಿ ಇರ್ಪುದು, ಮಾರನೆಯ ದಿನ ಶಿವಪೂಜೆಗೆ ಮಾಣಿಕ್ಯವಾಸರು ಲಿಂಗವಂಬರಹೇಳಿ ಕೊಡಲೂ ಬರುತಿದ್ದ ಲಿಂಗವಂ ನಾಚಿಯುಹಿಡಿದು ತಡೆಯಲಾಗಿ ನನ್ನ ಗಂಡನೆಂದಾಕೆಯೂ ನನ್ನ ಲಿಂಗನೆಂದೀತಲೂ ಸೆಳದಾಡುತ್ತಾ ಚಿದಂಬರದೀಕ್ಷಿತ ಸಭೆಗೆಬಂದು ನ್ಯಾಯವಂ ತೀರಿಸಿರೆನ್ನಲು ಅವರು ಲಿಂಗವಂ ಕೇಳಲ್ಕೆ, ಶರಣರಬಳಿಯಲ್ಲಿ ಹಗಲು ಲಿಂಗವಾಗಿರುವೆನೆಂತಲೂ ಭಕ್ತಳಬಳಿಯಲ್ಲಿ ರಾತ್ರಿ ಪುರುಷಾಕಾರನಾಗಿರುವೆನೆಂತಲೂ ಲಿಂಗವು ಹೇಳಲಾಗಿ ನಿನ್ನಿಷ್ಟವೇನೆಂದು ಮಾಣಿಕ್ಯವಾಸರು ಕೇಳಲ್ಕೆ, ನನಗೆ ತ್ಯಾಗ ಭೋಗಗಳು ಸಮಾನವೆಂದೊರೆಯಲು, ಸಭೆಯವರಾತಂಗೆ ವಿಪರೀತ ಗಣನಾಥನೆಂದು ಹೆಸರಿತ್ತು ಲಿಂಗವು ಹೇಳಿದಂತೆಯೇ ನಡೆಯಲೆಂದು ತೀರ್ಮಾನಿಸಿದ ಬಳಿಕ ಮಾಣಿಕ್ಯವಾಸರೂ ಶಿವಪ್ರಿಯನಾಚಿಯೂ ಸ್ವಸ್ವಭಾವಾನುಗುಣವಾಗಿ ಶಿವಲಿಂಗವಂಭಜಿಸುತ್ತಿರ್ದರು. ಮಾಣಿಕ್ಯಾಚಾರ್ಯರಿಗೆ ಬಹಳವುದಿತನವಾಗುತಲೂ ಅಭಿಷೇಕಕ್ಕೆ ಅಗ್ರೋದಕವಂ ತಂದುಕೊಡಲಾರದೆ ಶ್ರಮಪಡುತ್ತಿರುವುದಂ ಕಂಡು ಪರಮೇಶ್ವರನು ಬಾಲಜಂಗಮ ರೂಪಿನಿಂದಬಂದು ಮಾಣಿಕ್ಯವಾಸರೇ ನಿಮಗೆ ಲಿಂಗಮಜ್ಜನೋದಕವು ಕಾಲಕ್ಕೆತಪ್ಪದೆ ಶುಚಿಯಾಗಿ ತಂದುಕೊಡುತ್ತ ಶಿಷ್ಯನಾಗಿರುವೆನು ಗಣಸ್ತವನನ್ನು ನನಗೆ ಪಾಠಹೇಳಿರೆಂದು ಪ್ರಾರ್ಥಿಸಲು, ಅವರು ಅಂಗೀಕರಿಸಿ ಇರುತ್ತಿರಲು ಒಂದುದಿನ ಓನ್ನಮಃಶಿವಾಯೇತ್ಯಾದಿ ರುದ್ರಮಂತ್ರಗ್ರಾಮವನ್ನು ಶಿಷ್ಯಂಗೆ ಅಧ್ಯಾಪನಂಗೈಸೆ ಅವನು ಉಚ್ಚರಿಸದೆ ಮೌನವಾಗಿರಲು ಓನ್ನಮಃಶಿವಾಯ ಎಂದು ನುಡಿಯ ಹೇಳಿ ಅವನ ತಲೆಯಮೇಲೆ ಮೊಟ್ಟುತ್ತಲೂ ತಲೆಯು ಒಡೆಯಲಾಗಿ ಅವನುದೋಡಿಪೋಗಿ ಕೋಣೆಯಲ್ಲಿ ಸೇರಿಕೊಂಡು ಕದವಂ ಜಗಿದುಕೊಳ್ಳುತಲೂ ಮಾಣಿಕ್ಯವಾಸರು ಎದ್ದುಪೋಗಿ ಹೊಡೆಯುವದಿಲ್ಲ ಕದವಂ ತೆರೆಯಹೇಳಿ ಬೇಡಿಕೊಂಡರೂ ತೆರೆಯದಿರಲ್ಕೆ, ಮೀಟಿತ್ತಿ ತೆಗದು ಒಳನುಗ್ಗುವಾಗ್ಯೆ ಬರಿಯಕೋಣೆ ಇರ್ಪುದಲ್ಲದೆ ಶಿಷ್ಯನಿಲ್ಲವಾಗಿ ಅಚ್ಚರಿಗೊಳ್ಳುತ್ತಿರೆ ಶಿವಶಂಕರನು ಸಪರಿವಾರನಾಗಿ ಪ್ರತ್ಯಕ್ಷನಾಗುತಲೂ, ನಮಶ್ಶಿವಾಯ ಸಾಂಬಾಯಸಗಣಾಯಸೂನವೇ । ಸನಂದಿನೇಸಗಂಗಾಯ ಸವೃಷಾಯನಮೋನಮಃ । ಪಂಚವಕ್ತ್ರಂದಶಭುಜಂನಾಗಾಭರಣಭೂಷಿತಂ ಗಜಚರ್ಮಪರೀಧಾನಂ ವ್ಯಾಘ್ರಚರ್ಮಾಂಬರಾವೃತಂ । ಗಂಗಾಧರಂ ಚಂದ್ರಚೂಡಂ ದೇವಂಪಂಚದಶೇಕ್ಷಣಂ ॥ ನೀಲಗ್ರೀವಂಮಹಾದೇವಂ ಶೂಲಾಧ್ಯಾಯುಧಧಾರಿಣಂ । ವೃಷಸ್ಕಂಧಸಮಾರೂಢ ಮುಮಾದೇಹಾರ್ಧಧಾರಿಣಂ॥ಪ್ರಸನ್ನ ವದನಂಶಾಂತಂ ಸಚ್ಚಿದಾನಂದವಿಗ್ರಹಂ । ದೈವತಂದೈವತಾನಾಂಚಶಿವಂ ಪೇ ವ ವ ॥ ಮಾಣಿಕ ವಾಸ ಈಪರಾನ ಸುವರ್ಣ ಪವಿತ್ರ ಮೀಶ್ವರಂ

ಎಂದು ಸ್ಕಂದಪುರಾಣದ ಭಕ್ತವಿಲಾಸ ಪ್ರಕರಣದಲ್ಲಿ ಹೇಳಿದಂತೆಕಂಡು ಸ್ತುತಿಗೈವ ಮಾಣಿಕ್ಯಾಚಾರ್ಯರು ಶಿವಪ್ರಿಯನಾಚಿಯಾರ್ ಸಹಿತವಾಗಿ ಪುಷ್ಪಕದೋಳ್ಕುಳ್ಳಿರಿಸಿ ಪೂಮಳೆಗರದು ದೇವದುಂದುಭಿಗಳು ಮೊರೆಯುತ್ತಿರೆ ಶಿವನವರಂ ಕೈಲಾಸಕ್ಕೆ ಕೊಂಡೊಯ್ದನೆಂದು ಈ ಕುಲಚ್ಚರಿಯರೇ ಮೊದಲು ಕೂನಪಾಂಡ್ಯಂಗೆ ಚರಪಾದೋದಕದಿಂದ ಕೂನವಂಕಳೆದ ಮಹಾತ್ಮರೆಂದು ಪಾದೋದಕ ಪ್ರಭಾವಕ್ಕೆ ಸಾಕ್ಷಿಯಾಗಿ ಪುರಾಣಕಥೆಯಂ ಪ್ರೌಢರಾಯನಿಗೆ ಜಕ್ಕಣಾಚಾರ್ಯನುಸುರ್ದನು. ... ... *

ಇತಿ ಶ್ರೀಮತ್ಸಿದ್ಧಾದ್ರ್ಯ ಮಹಾಕವಿ ಪ್ರಣೀತಮಾದ ಪ್ರೌಢರಾಯನ
ಕಾವ್ಯದೊಳು ಅಷ್ಟಾದಶಸಂಧಿ ಸಮಾಪ್ತಮಾದುದು.
ಅಂತು ಸಂಧಿ ೧೮ಕ್ಕಂ ಪದ ೧೦೦೦ಕ್ಕಂ ಮಂಗಳಮಹಾ.

ಶ್ರೀಗುರು ಬಸವಲಿಂಗಾಯನಮಃ

—(ಹತ್ತೊಂಭತ್ತನೆಯಸಂಧಿ ಪ್ರಾರಂಭವು.)—

ಸೂಚನೆ ‖ ಈಶನಪ್ರಸಾದದ ಮಹತ್ವದೊಳು ಕಕ್ಕಯ್ಯ । ಆಶನನಾಗಾ ಬಿಕೋದರದಿಚನ್ನಬಸ । ವೇಶನುದ್ಭವವುನುಯಿದಾರಿರಕ್ಕಸಬ್ರಹ್ಮದೇವಯ್ಯನಾಕಥೆಗಳು ‖ ... ... *

—(ಪ್ರಸಾದಮಹಿಮೆನಾಗಲಾಂಬಿಕೆಯಕಥೆ)—

ಪದನು ‖ ಧರಣೀಧರವರತನಯೆ ಆರಸನೇಸರಸನೇ । ಶರಣಜನರಭಿಮತವನೀವದೇವರದೇವ । ತರಣೀಂದುಕೋಟಿಪ್ರಕಾಶಂದುರಿತವಿನಾಶ ನಖಿಳಬ್ರಹ್ಮಾಂಡಕೇಶ ‖ ಸುರವೃಂದಮಕುಟಮಣಿ ಕಿರಣರಾಜಿತಚರಣ । ಪರಮಮುನಿಹೃದ್ದೀಪ ಪಾವನಾತ್ಮಕರೂಪ । ಮರಣವಿರಹಿತನೆ ಮುದದಿಂದೆಮ್ಮಪಾಲಿಪುದೆನ್ನ ಸಂಗಮೇಶ್ವರಪ್ರಸನ್ನ ‖ ೧ ‖ ಶಶಿಧರಪ್ರಸಾದದುನ್ನತಿಯ ದೊಂದು ಸುಕಥೆಯು । ನುಸುರುವೆನುವಸುಧಶರಿಕೇಳುಕಲ್ಯಾಣದೊಳು । ಬಸವೇಶನಗ್ರಜೆಯುಬಿಸಜಾಕ್ಷಿಯಕ್ಕ ನಾಗಮ್ಮನೆಂದೆಂಬಶರಣೆ ‖ ವೃಷಭವಾಹನ ಇಷ್ಟಲಿಂಗತನ್ನಯಪುರುಷ । ಎಸೆವಗಣನಿಕರವೆನ್ನಯ ಬಂಧುನಿವಹದಾ ಗಸಗಣಿಕರಲ್ಲೊಂದುಪಲಿವಿವಸವಿಂತೆರವಿ ಭಕ್ತಿಯಂಮಾಡುತಿರ್ಪಳು ‖ ೨ ‖ ಒಂದುದಿನಬಸವೇಶ ಬಿಜ್ಜಳನಪೋಲಗಕೆ । ಚಂದದಿಂಪೋಗುತಿರೆ ಕಕ್ಕಯ್ಯತನ್ನಯಾ ಮಂದಿರದಿಕುಳಿತಿರ್ದ ಬಸವೇಶನಂಕಂಡು ಕೋಪ್ರಸಾದವನೆನ್ನಲು ‖ ಬಂದಪೆನುಪ್ರೀತಿಯಲ್ಲ ವರ[illegible]ಕಳುಹಿ । ಯೆಂದುಮುಂದಕ್ಕಡಿಯ ನೋಂಪೆನಿಸಿ

ಕಕ್ಕಯ್ಯ | ಬಂಧಿಸಿತನ್ನ ಬಾಕಿಲಕವಾಟವನಾಗ ಬಸವೇಶಕಂಡುತಿರುಗ||೩||
ಶರಣಕಕ್ಕಯ್ಯ ಬಾಗಿಲತೆರದುನಿಮ್ಮಯಾ | ಪರಮಶಿವಶೇಷವನುಪಾಲಿಸುವು
ದೆಂದುಬಹು | ಪರಿಯಿಂದೆ ದೈನ್ಯಬಡಕೇಳಲೊಲ್ಲದೆ ಕದವತೆಗೆಯದೇಸುಮ್ಮ
ನಿರಲು || ಹರಪ್ರಸಾದವು ದೊರೆಯೆ ಲಿಲ್ಲೆಂಬಚಿಂತೆಯಲಿ ಮರುಗುತ್ತಪರಿ
ತಂದು ರಾಜಕಾರ್ಯವತೀರ್ಚಿ | ಮಸಳಿತನ್ನಾಲವ ಭರದಿಂದೆಪೊಕ್ಕನಾಬಸ
ವೇಶ ನತಿದುಗುಡದಿ || ೪ || ಉಸುರಲಿನ್ನೇನು ಶಿವಶರಣಕಕ್ಕಯ್ಯಗಳು | ಶಶಿ
ಧರಾರ್ಚನೆಗೈದು ಶಂಭುಶೇಷವನುಸೇ | ವಿಸುವನಕನಿತ್ಯದ್ವಾರವನು ಬಂಧಿ
ಸುತಿರಲು ಬಡಬೆ ಪೊರಬಾಗಿಲಲ್ಲಿ || ಬಸವೇಶಕಾದಿದ್ದು ಆರೋಗಣೆಯ
ಮಾಡಿ | ವಸುಧೇಶನೋಲಗಕೆ ಪೋಗುತ್ತಲಿಂತುದ್ವಾ | ದಶವರುಷನೋಡು
ತಿರೆಕಕ್ಕಯ್ಯಗಳ ಪ್ರಸಾದವು ದೊರೆಯದಿರಲೊಂದಿನ || ೫ || ಒಂದಗುಳನಿ
ರುಹಪೊರೆಯಕೆಕಚ್ಚಿಕೊಂಡುನಡೆ | ತಂದುದಂ ಬಸವೇಶಕಂಡು ತವರಾಜ
ಮಂ | ಮುಂದಿರಿಸಿತರುತಿಪ್ಪ ಶೇಷವನುಬಿಟ್ಟು ಅದನೇತೆಗೆದುಕೊಳ್ಳಲಾಗ ||
ಇಂದುಬದುಕಿದನೆಂದು ವಂದನೆಯಮಾಡುತ್ತ | ಚೆಂದದಿಂದ ಪ್ರಸಾದವನುಕ
ರದೊಳಕಾಂತು | ಮಂದಿರಕೆ ಬಂದುಮಡಿವಸ್ತ್ರದೊಳು ಬಂಧಿಸುತೆಸುಸ್ಥಳ
ದೊಳಿರಿಸಿಮುದದಿ || ೬ || ಶಿವಪೂಜೆಗೈದು ಬಳಿಕಲಿಸೇವಿಸುವೆನೆಂದು | ತವ
ಕದಲಿ ಲಿಂಗಾರ್ಚನೆಯಮಾಡುತಿರಲಾಗ | ಭವರಹಿತ ಭಕ್ತನಾಗಮ್ಮಗಳು
ಬಂದುಪಾವಡದಿಕಟ್ಟಿಪ್ಪದೇನು || ಶಿವಭಕ್ತಬಸವೇಶಮಾಜದೇಪೇಳೆನಲು |
ಶಿವನೇತ್ರಶರಣಮಣಿ ಕಕ್ಕಯ್ಯಗಳ ಪ್ರಸಾ | ದವುಬಿಚ್ಚಿನಿಜಲಿಂಗಪೂಜೆಗೈ
ದೈತರ್ಪೆನನ್ನೆ ವರಸ್ವೈರಿಸೆನಲು || ೭ || ಬಡವರಾದವರುಕೂಡುವರಕಂಡು ಜರಿ
ವರೇ | ಮಡಿವನಗೆ ಮರುಜೀವಣಿಗೆ ದೊರೆಯಲೊಲ್ಲದೆ | ಬಿಡುವನೇನರಕ
ದೊಳುಬಿದ್ದು ಪೊರುಳಿತ್ತಲಿಹ ಮಾನ್ಯನಾಶಿವಲೋಕಕೇ || ನಡೆಯೆಂದುಕರೆ
ಯೆ ಹಿಂದುಳಿವಹೆಡ್ಡಗುಪ್ತಂಟೆ | ಬಿಡದೆಯಘಕೋಟಿಯನು ತಡೆಯದೇಸುಡು
ತಿಪ್ಪ | ಮೃಡಪ್ರಸಾದವನಾನು ಬಿಡಲಾರೆನೆಂದು ಸೇವಿಸಿದಳಾನಾಗಾಂಬಿಕೆ
೮ || ಪರಮಪ್ರಸಾದವನು ಸವಿದುನಾಗಮ್ಮಗಳು | ಹರಷದಿಂದಿರಲಿತ್ತ ಶಿವಶೇ
ಷಬಲದಿಂದ | ವರವೇದಶಾಸ್ತ್ರಗಮಗಳು ರೂಪಾದಂತೆ ಗರ್ಭವಂಕುರಿಸಿ
ತಾಗ || ಹರಶರಣರೆಲ್ಲಮುದ ವೈದುವಂತೊಡಲಲ್ಲಿ | ಪರವಾದಿಗಳಸಲ್ಲ ಮುರಿ
ವಂತೆಬಹನೆಂದು | ಸ್ವರವೆತ್ತಿಕೂಗುತಿರೆಪುರಜನಂಚೆರಗಾಗಿ ದೇನಚ್ಚರಿಯ
ಮೆಂದರು || ೯ || ಈತೆರದಿನವಮಾಸತುಂಬಲು ಸುಲಗ್ನದಿಪ್ರ | ಸೂತಿಯಾದ
ಳುಬಸವದಂಡೆನಾಯಕನಗ್ರಜಾತೆಕಡು | ಸಂಭ್ರಮದಿಸುತನನೀಕ್ಷಿಸಿಸರುಷ
ವಾರಿಧಿಯೊಳೋಲಾಡುತ || ಪ್ರೀತಿಯಲಿಪಾಲಿಸುತಲಿರೆಶಿಶುವನೋಡುತ್ತ |
ಮಾತುಳಂಬೇಗಬಾಲಕ್ರೀಡೆಗೆಗಳಮಾಡಿಸಿದೆ | ಮಾತುಗಳಕಲಿತುಬೆಳೆಯುತ್ತಿ

ವಿದಾರಂಭವಾದಪ್ರಬುದ್ಧನಾಗೆ ‖ ೧೦‖ ಶಿಧರನಭಕ್ತನಾರಿಥಿಚಂದ್ರನಾಗಿ
ರ್ದ । ಬಸವೇಶನಿಂದ ಉಪದೇಶಗೊಡಿಸುತಚೆನ್ನ । ಬಸವೇಶನೆಂದುಹೆಸರಿಡಿ
ಸಿಸುಖ ದೊಳಗಿರ್ದಶಕ್ತನಾಗವ್ಮಬಳಿಕ ‖ ಬಸವದಂಡೇಶನೊಳುವಾನವಜರ
ಸುತಚನ್ನ । ಬಸವೇಶನೊಳುಕನುವ್ರುಚಿರಿಸಿ ಪ್ರಭುದೇವರೊಳ । ಗಸುಜರಿ
ಯಂತ್ರದೊಳುತನ್ನಿಷ್ಟಲಿಂಗದೊಳು ನಿಂದಯುವವಾದರರಸ ‖ ೧೧ ‖ ಕರ
ಣಕಾಲಯುದಿಂದೆ ಶಿವಪ್ರಸಾದವಬಿಡದೆ । ಪೊರಯುಕ್ಕಿತಂದಾ ಪಿಪೀಲಿಕೆಗೆ
ಸೋಂಕಿದಲಿ । ಪರಲೋಕಪದಸಾಯಿತೀಶೇಷದುನ್ನತಿಯ ಪೇಳ್ವರಾರಳವ
ಲ್ಲವು । ಮದದುಸ್ವಪ್ನದಿ ಸನಿಯುಲಿರಸಾಗಿ ಪುಟ್ಟುವನು ಅರಿದಾದಡದರಫಲ
ವನುಪೇಳ್ವುದಘಟಿತವು । ಪರಿಶಂಕೆಗೊಂಡವಗೆ ನರಕತಪ್ಪದುಕೇಳ್ವುದೆಂದ
ನಾ ಜಕ್ಕಣಾರ್ಯಂ ‖ ೧೨ ‖ ... ... *

—(ಸುಯಿದಾರಿಭೂಪನೆ ಕಥೆ.)—

ಕೇಳಲೆನರೇಂದ್ರ ಮತ್ತೊಂದುಕಥೆಯಂಪೇಳ್ವ । ಭಾವಲೋಚನಭ
ಕ್ತರಾಲಯುವಿಸೇವಿಸದೆ ।ಕಾಳಿಯಾದುದನೊರೆವೆಸುಈದಾರಿಭೂಪಬಂಗಾಳ
ದೇಶವನುಸುಖದಿ ‖ ನಾಳುತೊಂದಿವಸಚತುರಂಗ ಬಲಸಹಿತನೈ । ಕಾಳಿಯಂ
ಪೋಗಿಬರುವನಿತಕ್ಕೆರವಿಮುಳುಗೆ। ಕಾಳಗತ್ತಲೆಬಲಿಯೆಬರಲಾರದೆಲ್ಲರುಂಕಾ
ಡುಪಳ್ಳಿಯೊಳಗಿಳಿಯೆ ‖ ೧೩ ‖ ಪೊರಕೇರಿಯುವರಲ್ಲಿ ಶಿವಭಕ್ತನೋರ್ವತಾ ।
ಭರದಿಂಪಲ್ಲನನೆಡೆಗೈತಂದು ಎಲೆದೇವ । ಕರುಣದಿಂದೆನ್ನಾಲಯುಕೆಬಂದುಶ
ರಪ್ರಸಾದವನುಭುಂಜಿಸುವುದೆನುತ। ವರಭಸಿತವೀಯಲ್ಕೆ ಹರುಷದಿಂ ಕೈಕೊ
ಳಲು । ಮರಳಿನಿಜಗೃಹಕೆನಡೆತಂದು ಸತಿಯೊಂದಬರು । ತ್ವರಿತದೊಳುಪರ
ಮಾನ್ನ ಭಕ್ಷ್ಯಶಾಕಾದಿಗಳ ಪರಿಪಾಕಗೈಸಿತಾನು ‖ ೧೪ ‖ ಜನಪನೆಡೆಗಂಬಂ
ದುಯಾರೋಗಣೆಗೆತೇಳಿ । ರೆನಲುನೀವಾವಕುಲಜವರೆಂಬಭೇದವನು । ಅನು
ಮಾನವಿಲ್ಲದೆನ್ನೊಳು ಪೇಳ್ದ ಬಳಿಕನಿಮ್ಮಯಗೃಹಕ್ಕೆ ಬಪ್ಪೆನೆನಲು ‖ ಘನನ
ರುವಿನಂದದೀಕ್ಷೆಯುಪಡೆವ್ರುತಘಿದಜೀ । ರನೆಕಿತ್ತುಪೂರ್ವಜಾತವನಳಿದುಪುನ
ರ್ಜಾತ । ನೆನಿಸಿದವಗಾವಕುಲವೆಂದುಪೇಳ್ವೆನೆನಾವು ಪೊರಕೇರಿಯಲ್ಲಿಬನೆನೆ
೧೫‖ ಧರಣಿಪಗೆಸಂಶಯುವುಪುಟ್ಟಲ್ಕೆತನ್ನಯಾ । ಗುರುವು ವಾಮನಮುನಿಯು
ಕರದುಕೇಳಿದನಿದಕೆ । ತೆರನಪೇಳುವುದೆಂದುಬೆಸಗೊಳಲು ನೀವುಕ್ಷತ್ರಿಯರು
ಪೊರಕೇರಿಯುವರ ‖ ಬೆರಸಬರುದೇಯೆನಲ್ಕರಸುಭಕ್ತನಮನೆಗೆ । ಬರಲಾಗ
ದೆಂದುಬೀಳ್ಕೊಟ್ಟು ರವಿಯುದಿಸಲ್ಕೆ । ಪರಮಹರುಷದಿತನ್ನ ಚತುರಂಗಬಲಸ
ಹಿತನಿಜಪುರಕತೆರಳುತಿಹರು ‖೧೬‖ ಆಸಮಯದಲ್ಲಿದೂರ್ವಾಸಮುನಿಬಂದುಧರ
ಣೀಶನುಣ್ಣದಪ್ಪೊಪತೆರನೆನೆಲ್ಲವಕೇಳಿ । ಯೀಶಭಕ್ತರಜಾತಿಭೇದದೊಳುಚರಿ
ವರೇಗ್ಯಾನಸಾಗೆಂದುಶಪಿಸೇ ‖ ವೇಸವಾಬಿತೆಂದುನಡನಡುಗಿನಿಮ್ಮಂಫಿ

ವಾಸವಾದೆನ್ನ ಸುಳುಹಂದು ದೈನ್ಯಂಬಡೆವು । ನೀಕವುದವಿಂದನೋಡುತವ
ನದೊಳಗಿಕದುಣಪುಟ್ಟಿವುಗುಳಿಂತೆಂದನು ॥೧೭॥ ಪರಭಕ್ತರಾವುನೆಯುಭಾಂ
ಡಪ್ರಸಾದವೇ । ದೊರಕೊಳೆನಿಂಪನಾಗುತವುಕ್ತಿಯುಂಪಡೆವೆ । ನರನಾಥ
ಕೇಳಿಗೆನಲ್ ಗಾಶ್ರಮಸಿಂಹಕನಾಗಿಶಿವಭಕ್ತರಾಗ್ರಹಗಳ ॥ ಇರುತಿರುಗಿನೋ
ಡುತ್ತೆರದಿರೆಯುವಿರೆಬೇಕುಂಡು । ಚಿರಕಾಲಬಾಳುತ್ತಿರಲೊಂದುದಿನಬೇವಿಯೊ
ಳು । ಬರೆತನ್ನ ಗುರುವಾದವಾಮನಮುನಿಯುಕಂಡು ಬಗ್ಗಿಬಾಳುವನಲುಗುತ ॥
೧೮ ॥ ಬಂದುಚರಣವಿಬಿದ್ದು ಪೊರಳುತ್ತಿರೆಜ್ಞಾನದೃಗ । ದಿಂದನಿಟ್ಟಿಸಿತನ್ನ ಶಿ
ಷ್ಯನೆಂಬುದತಿಳಿದು । ನೊಂದುತನ್ನ ಮುನವಿ ದೂರ್ವಾಸಮುನಿರಾಯನಿಂ
ಪಾದಶಾಪಡೆದನು ॥ ಮುಂದೆಮುನಿಪೇಳ್ದಂತೆ ತನ್ನಿಪ್ಪತ್ತಿಯುಕಾಂಚೀ ನೆಂದು
ತನ್ನೊಡನಿರ್ದ ಶಿಷ್ಯರೀಸ್ವರುಸಹಿತ । ಕೊಂಡುಸ್ಥಳದೊಳುಪೋಗಿ ಯಿಳುಹಿ
ಕೊಂಡಿರಲು ಶುನಿಬೆಂಬಿಡದೆಬರಲ್ಲಿಗೆ ॥೧೯॥ ಬರುವಶುನಕನಕಂಡು ಸೇವಕ
ರುಕೋಪದಿಂ । ಪೊರೆಯುಕ್ಕನೂಕುತ್ತಿರೆ ಪೊಡಯುಬೇಡವ್ರುಯಿರಲಿ । ಯಿರುಳೆ
ನ್ನಕಾಯ್ದಿಹುದು ಎಂದವರಸಂತವಿಸಿಯಿರಿಸಿಕೊಂಡಂದಿನಿರುಳು । ಶರಿರಜೋ
ಪನಗೈದುಮುಂದೆಂದುಶಿಷ್ಯರಿಗುಸುರಿ । ಪರಿಕಾಮುಪದೇಶಬಲಾತ್ತನಾಗಿಕು
ಕ್ಕುರನೊಂದುಸತ್ತುಬಿದ್ದಿರಲದರ ಕಾಯದೊಳುಪೊಕ್ಕುಮನೆಮನೆಯುತಿರುಗಿ
೨೦ ॥ ವೇದಘೋಟಕಭಕ್ತರಾಲಯುವಿಭಕ್ತಪ್ರ । ಸಾದವನುತಂದುಶುನಿಯಾ
ದಶಿಷ್ಯಗೆಕೊಟ್ಟು । ಪೋದಪೆನೆನುತ್ತರಸುತಿರಲೋರ್ವಮರದು ಕೋಣೆಯುಕ
ನಾಟವ್ರುತರದಿರೆ ॥ ಸಾಪರದಲೊಳಪೊಕ್ಕುನೋಡುತಿರಲರಿಯದೆ । ಮಾಧವಾ
ತ್ಮಜವೈರಿಭಜಕ ಕಪವನುಬಲಿಯೆ । ಹಾದಿಯಿಲ್ಲದದಿವಸತ್ರಯುವ್ರುಸಿಲ್ಕಿರೆಶರಿರ
ಕಾದಿಪ್ಪಶಿಷ್ಯರಾಗ ॥೨೧॥ ಎರಡುವಾಸರನೋಡಿಕರಬಾರದೆಯಿರಲು। ಮ
ರಣವಾದಪನೆಂದು ಗುರುಕಾಯವನುದಹಿಸಿ । ಮರುಗುತ್ತದೇಶಾಂತರಕೆಪೋ
ಗೆಸಿಕ್ಕಿದರ್ಶಾನ್ಯನ ನಾಲ್ಕನೆದಿವಸಕೆ ॥ ತೆರೆಯುಬಾಗಿಲವಪೋದಮುಟ್ಟುವುನ್ನಿನ
ತನ್ನ । ಶುರವನುಕಾಣದೇಕಳವಳಿಸಿಬೆಂಡಾಗಿ । ತಿರುತಿರುಗಿಬೇಸತ್ತು ಹರಭ
ಕ್ತರಿಂದೆಮುಕ್ತಿಯು ಪಡೆವೆನೆಂದರಿವ್ರುತ ॥೨೨॥ ಧನಪಸಖಭಕ್ತಹಾವಿನಹಾಳ
ಕಲ್ಲಪ್ಪ । ನೆನಿಪಶರಣನಗೃಹದ್ವಾರಿಗಂಘೀರನಾ । ದನುಯೆಂಬಪೆಸರಿಂದಕಾ
ಪ್ಪಿರಲುಸಲಕಾಲವಾಗಲೊಂದಿವಸದಲ್ಲಿ ॥ ಘನಮಹಿಮಕಲ್ಲಿದೇವನ ಮನೆಯು
ದಾಸಿಭೋಗ । ಕನೆಜಲವತುಂಬಿತಪ್ಪನಿತರೊಳುವಿಪ್ರಸ್ಸ । ರ್ಶನವಾಗೆಕಾಂ
ಭವನೊಡದು ಚೆಲ್ಲಿಯುವ್ವತ್ತಿರಲು ಹಾರುವರಗುಂಪುಸೇರಿ ॥ ೨೩ ॥ ಎಲೆಕೇಳು
ದಾಸಿನೀಂಪೇಡಪಾತಕರಾವ್ರು । ಕುಲದೊಳಗ ಜರೆನಲು ನಲುವಿಂದವುಟ್ಟಿ
ಪರೆ । ಜಲಕುದ್ಧಮಕ್ಕವ್ವಜೆರಿವ ಕಾರಣವೇನುಪೆಲ್ಲುಮನುಜರತೆರದೊಳು ॥
ನಲಿನಿನ್ನ ಸಾಕಿದೊಡೆಯನ ಬಳಿಗೆಪಡೆಯೆಂದು । ಬದಲುಕವಸವಿದ್ದುದು ಕಲ್ಲಿ

ನಾಥನಕಂಡು । ಸಲುಗೆಯಿನತೀಕಿವಳು ಸೋಂಕಿದಡೆಬ್ಬೆಯ್ಯಳಾ ವಿವಳಿಂದ
ಲೇಂಪಿನರೇ ॥೨೪॥ ಎಂದವಿಪ್ರರುನುಡಿಯೆ ಕಂದುಗೊರಳನಭಕ್ತ। ನಂದದಿಂ
ನುಡಿದಶರಣರಮನೆಯಕಾಯ್ವಶುನಿ । ಗಿಂದಕಡಿಮೆಯುನೀವು ಮುಟ್ಟಬಹು
ದೇಯೆನಲು ಶುಚಿಯುತಪವಿಶುನಕನಿಂ ॥ ಇಂದುಪೋದಿಸಿದಡೇನಿಮ್ಮನುಡಿದಿಜ
ವೆನಲು । ಚಂಡದಲಿಗಂಭೀರವಾದನೆಂಬುವಶುನಕ । ನಿಂದಲೇಚತುರ್ವೇದಗಳ
ನಾಗಕುಂದಿಲ್ಲದಂತೆ ವಾಚಿಸಿದನಾತಂ ॥ ೨೫ ॥ ವಾದಿಗಳುಕೇಳಿನಾಚುತ್ತತ
ಮ್ಮಯುಗೃಹಕೆ । ಪೋದರೆನೆಂಬ ಶಿವಚರಣಭಕ್ತಿಯಮಾಡಿ । ಸಾದರದೊಳಿ
ರುತಪಾವನಮುನಿಗೆ ಶುನಿಜನ್ಮಬಿಡಿಸಿ ಮುಕ್ತಿಯನೆಕೊಟ್ಟು ॥ ಭೇದನಿರ್ಭೇ
ದನಿಗಮಾನೀತನಿರಾಮಯು । ನಾದಬ್ರಹ್ಮವಕಂಡು ಕರಕಂಜಪುರಕೆಪತಿ। ಯಾ
ದಿಷ್ಟಲಿಂಗವೊಳೆ ನಿರ್ವಯುಲನೈದಿದರುಸುಯಿದಾರಿಭೂಪನಿತ್ತ ॥೨೬॥ ಪರಿಪ
ರಿಯುಭಕ್ತರಾಲಯುಗಳನು ತಿರುಗುತ್ತ । ಪರಭಕ್ತರಾಮನೆಯು ಭಾಂಡಪ್ರ
ಸಾದವನು । ದೊರೆಯುವಿರೆಬೇಸತ್ತುಚಂಡಾಗಿಶ್ವಪಚಯ್ರುಗಳಬಾಗಿಲವನೆಕಾ
ಯ್ದು ॥ ಇರುತಿರಲುಪಲದಿನಕೆ ಪೊಡದಮಡಿಕೆಯತಂದು । ಪೊರೆಯಕ್ಕೆಬಿಸು
ಡಲೊಂದಗುಳುಪತ್ರಿರೆಕಂಡು ಪರಿಪಾಕನ್ಯೈದುಮುಕ್ತಿಯ। ಪಡೆದನೆಂದೊರೆದ
ಪ್ರಪುಷಂಗೆಜಕ್ಕಣಾಚಾರ್ಯಂ ॥ ... ... ॥೨೭॥

—(ರಕ್ಕಸಬ್ರಹ್ಮಯನ ಕಥೆ.)—

ಮೇದಿನೀಶನೆಕೇಳು ಮುದದಿಂದೆಪರಮಪ್ರ । ಸಾದವನುನಂಬಿ ಯದ
ರಿಂದೆಮುಕ್ತಿಯಪಡೆದ । ಭೇದಶಿವಭಕ್ತರಕ್ಕಸ ಬೊಮ್ಮದೇವಯ್ಯನೆಂಬ ಶರ
ಣನಕಥೆಯನು ॥ ಸಾದರದಿಕೇಳುತೊಟ್ಟಲಪಾಳಿಪುರತೆಪಕೆ । ಯಾದಬ್ರಹ್ಮ
ಯ್ಯಪವಿತಾಸುಗ್ರಮಂಗಳಿಗೆ । ಭೂಧವನೆತಾನಾಗಿ ತನ್ನ ಕಟ್ಟಳೆಯಿಂದ ಸು
ಖದೊಡನೆಬಾಳುತಿಪನು ॥ ೧೮ ॥ ಪರದಭೂಮಿಯತಾವು ತೆಗದುಕೊಳಲಿಕ್ಕಿ
ಲ್ಲ ॥ ಪರಧನೆಪರಸ್ತ್ರೀಯಕನಸಿಲಾದರುಕಂಣ । ತೆರದುನೋಡಲ್ಲಿಲ್ಲಪರರಿಂ
ಗೆತಮ್ಮಧರಣಿಯುಪೋಗಲೀಯಗೊಡದೆ ॥ ಪರರಪೀಡಿಸದೆ । ಪರರಿಗೆ ತಾವು
ಮುನಿಯದೇ । ಪರಚರವನರಿವುತ್ತ ಪರಮಸಂತೋಷದೊಳು ಹರಭಕ್ತಿಯನು
ನಡಿಸುತಿ ॥ ೧೯ ॥ ಸತ್ಯವನುನುಡಿವುತ್ತೆ ಸಟೆಮಾತಜರಿವುತ್ತೆ । ನಿತ್ಯ ತಪ್ಪದೆ
ಪ್ರಸಾದದಕಟ್ಟಳೆಯುತಮಗೆ ॥ ಆತ್ಯಧಿತವ್ರತದಿಂದ ಚರಮೂರ್ತಿಗಳನುನಿವಿ
ಪಗೈದುಯಿರಿಸಿಕೊಂಡು ॥ ಭೃತ್ಯನಂದದಿಸೇವೆ ಗೈವುತ್ತಮುನ್ನ ವರ । ಮೃ
ತ್ಯುವೈದರೆಶಾನು ಪುಳಿಯದೇಸಾಯುವದು । ಸತ್ಯತವ್ರೊಡನಾತನ್ನೈನ್ನೆಕ್ಯ
ಗೊಳಬೇಕೆಂದು ದೃಢಭಕ್ತಿಪಿಡಿವಿರಲ್ಕೆ ॥ ೨೦ ॥ ಒಂದುದಿನ ಚರಮೂರ್ತಿಕೇ
ಳ್ತನೆಲೆಬ್ರಹ್ಮಯ್ಯ । ಸಿಂಧುಸೌರಾಷ್ಟ್ರಗೋಕರ್ಣ ಕಾಶಿಯುಸೇತುಬಂ
ದರಾಮೇಶ್ವರವು ಮೊದಲಾದ ಕ್ಷೇತ್ರಗಳನೋಡಬೇಕೆಂದುಮನದಿ ॥ ನಂದೇ

ನಪುಟ್ಟಿಸುದುಬೀಳ್ಕೊಟ್ಟಡಾಂನೋಡಿ । ಬಂದಪೆನೆನುತ್ತೆಬೆಸಗೊಂಡನಿವ್ರು ಯ ಪಾದದ್ವಂದಲಿ ಸಕಲತೀರ್ಥಂಗಳುಂಟವತೊರಿದ ಪೆಪ್ರೋಪುದೇತಕ್ಕನೆ ॥ ೩೦॥ ತ್ವರಿತನೋಡುವೆನೆನಲು ಹರುಷಪಿಂಕರಪೊಯ್ದು । ಕರುವಾಡದಗ್ರದೊಳುನಿಂದುಕೆಲಬಲದಲಿ । ಮೆರವುತಿಪಕೇದಾಗ ನೀಲಕಂಠಕ್ಷೇತ್ರಪ್ರೊರವಳಿಯುಶ್ರೀಶೈಲವು ॥ ಕರುವುಕಟ್ಟುವ ಅಂಗಳವಕಾಶಿಗೋವುಗಳ । ಕರಸಿಕೊಂಬುವತಾವುಗೋಕರ್ಣವಾಬಲವು । ಧರಣಿಗತ್ಯಧಿಕಕ್ಷೇತ್ರಗಳ ವಿಸ್ತಾರವನು ತುಂಬಿಟ್ಟುತೋರಿಸಿದನು ॥೩೧॥ ಇಂತಪ್ಪಕ್ಷೇತ್ರಗಳನೋಡಿಜಂಗಮಲಿಂಗ । ಸಂತಸಂಬಟ್ಟುಪ್ರೋಗುವು ದಿಲ್ಲವೆಂಬುತ । ಚಿಂತೆಮನದೊಳು ಪುಟ್ಟಿಪೇಳಿದ ಚಿಬಿಡನೆಂದು ಅರ್ಧರಾತ್ರಿಯಲಿಯೆದ್ದು ॥ ತಾಂತೆರಳುತಿರೆಕಂಡು ಪಿಡಿತಂದು ಶಿರಗಡಿದು । ಕಂತುಮರ್ದನಿಪ್ರೂಜೆಗೈದು ಕೋಣೆಯೊಳಿರಿಸಿ । ಅಂತಕಾಂತಕ ಭಜನೆಮುಗಿದ ಬಳಿಕಳಿಮುಂಡ ರುಂಡಕ್ಕೆಪತ್ತಿಸುತಲಿ ॥ ೩೨ ॥ ಇಂದುಶೇಖರಜೀಯಯೆಂದು ಪಾತ್ರಣವಪಡೆದು । ವಂದಣಯುಮಾಡಿಯರ್ಪಿತವು ಮೊದಲಾದಕ್ರಮ । ದಿಂದೆಸತ್ಕರಿಸಿ ಶಿರಗಡಿದಿಟ್ಟುದಿನಕೆ ಮೂರನೆ ವೇಳೆಯುಂತುಗೈದು ಬಂದಜಂಗಮಕೆ ಬಿನ್ನಪಮಾಡಿಯುಳ್ಳಿರ್ಪು । ದೆಂದೆನಲ್ಕಿರಲೊಡಂಬಟ್ಟುವರನೀರೀತಿ । ಯಿಂದೆಪ್ರೂಜಿಸುತವರತಲೆಗಡಿದಸುವಪಡೆದು ನಿತ್ಯಕ್ರಿಯೆಯನಡೆಸುತ॥ ೩೩॥ ಇರುತಿರಲುಸಕಲಜನನೋಡೆಬೆರಗಾಗಿಭ । ಕ್ತರನಡವಳಿಯುದುಲ್ಲರಕ್ಕಸಬ್ರಹ್ಮಯ್ಯ । ನರರೆಯುಕುಪೆಂದು ಕರೆವುತ್ತಿರಲ್ಶಿವನೆ ಜಂಗಮರೂಪಿನಿಂದ ಬಂದು ॥ ಶರಣರಕ್ಕಸಬ್ರಹ್ಮದೇವಯ್ಯನಾಭಕ್ತಿ । ಯಿರವನೆಲ್ಲವಕಂಡಿದೇನೆಂದುಬೆಸಗೊಳ್ಳಲು । ಇರಲೊಲ್ಲೆನೆಂದುಪ್ರೋಪರ್ಗೆಖಡ್ಗದಪ್ರೂಜೆತಪ್ಪದೇವಾಕ್ಯ ನುಚೆನಲು ॥೩೪॥ ಹೊಟ್ಟೆಗನ್ನ ವಬಿಡದೆನೀಡುತಿರಲೀಮನೆಯು। ಬಿಟ್ಟುದೇಶಾಂತರವತಿರುಗಿಬಳಲುವುದೇನು । ನೆಟ್ಟನೇನಿನ್ನ ಬಿಟ್ಟೆಗಲೀಪ್ರೋಗುವುವಿಲ್ಲಗಟ್ಟಿಬಿನ್ನ ಪಮಾಡನೆ ॥ ಕಟ್ಟಿನೊಳಗಾಗಿರುತಪ್ರೋಗೆ ಖಡ್ಗದಪ್ರೂಜೆ । ಬಿಟ್ಟುದಲ್ಲದುಪ್ರೋಪೆರೆನೆನೀವು ಬಲುಹಿಂದ । ಲಟ್ಟಿದರೆಪ್ರೋಗಲಿಕ್ಕಿಲ್ಲವನಬಿನ್ನ ಯಿಸಿ ಇಟ್ಟುಕೊಂಡನುಹರ್ಷದಿ ॥ ೩೫ ॥ ಇಂತಿರುತಲೊಂದುದಿನ ಪ್ರೋಪೆನೆನೆಬಿಡಕಾಣ । ದಂತೆಪ್ರೋದಡೆಯನ್ನ ಚೆಂಬತ್ತಿಬಹನೆನುತ । ಸಂತಸದಿಲಿಂಗಾರ್ಚನೆಯಸಮಯಮನ್ನೋಡೆಪ್ರೋಗೆ ಕಂಡವರುಪೇಳೆ ॥ ಕಂತುಹರಪ್ರೂಜೆಯನುಬಿಟ್ಟುಪ್ರೋಗಲಿಬಾರ । ದೆಂತುಗೈದಪೆನೆನುತಚಿಂತಿಸುತತನ್ನ ಶಿರ । ಮುಂತೆಂದು ಶಿವನಮರೆಯೊಗಲುಪಿಡಿತರುವುದೆಂದಾಗನೇಮಿಶಿಕಳುಹಿಸಿ ॥ ೩೬॥ ಕರದಿಷ್ಟಲಿಂಗವನು ಮುಂದಪೇಕ್ಷಿಸುತಿರೆಶಿರವು । ಅರ್ಧಟಿಸಿನಿಧಾರ್ತಕೇಳಿಯೆಂದೆಂದು ಭರದಿಂದಶಿಗಜಂಗಮರೂಪಾಗಿರುವ ಶಿವನಬೆಂಬತ್ತಿಬಹವೇ ॥ ಸ್ವಶಿರವಿಂತ್ತೆರೆಸಮುಂದಿತ್ಸಕಾಪಾದ । ಕೇಳಿಬಿನ್ನಪಗೈದಿ ಶಂಕರಂಮೆಚ್ಚಿಪ್ರಿಯ । ಧ

ರುಷಹಿತರಕ್ಕಸ ಬ್ರಹ್ಮಯ್ಯ ನೆಡೆಗೈದಿ ನಿನ್ನ ಬಯಕೆಯ ಬೇಡೆನೆ ॥೩೮॥ ಎನ್ನ ವಲ್ಲಭನಿನ್ನ ದಾತಾರನೆನಸ್ಸಾಳ್ವ । ಮುನ್ನ ಭಕ್ತಿಯ ಘನವ ನನಗೆಕೊಟ್ಟಿರಲಾನು ಇನ್ನು ಬೇಡುವುದೇನು ಇನಿತು ಜಂಗಮವ ಕೊಂಡೊಯ್ಯುವುದ್ಯೆ ಕೈಲಾಸಕೆ॥ ನಿನ್ನ ಚರಣದ ಪದುಮದ ಕಡೆಯಲ್ಲಿ ಬಪ್ಪೆನೆಂ । ದುನ್ನತೋತ್ಸವದಿಂದೆ ಭಕ್ತಿಯ ಜಂಗಮವ । ಭಿನ್ನ ನಾಗದ ತೆರದಿ ಮುಂಡದೊಳು ರುಂಡವನೆ ಬಲಿದು ಪ್ರಾಣವನೆ ಪಡೆದು ॥೩೯॥ ಮೃಡನೊಡನೆ ಚರಮೂರ್ತಿಗಳನು ಕಳುಹಿಸಿ ಬಳಿಕ । ಪೊಡವಿಯೊಳು ಪಲದಿವಸ ಛಲಭಕ್ತಿಯನು ಬಿಡದೆ । ನಡಸುತ್ತ ನಿತ್ಯ ಪ್ರಸಾದವನು ಸೇವಿಸುತ ದೃಢಭಾವ ಬಲಿದಿರುತಲಿ ॥ ಕಡೆಯಲ್ಲಿ ತವ್ವ ಸಮಯಾಚಾರ ಜಂಗಮವ । ನೊಡಗೊಂಡು ತನ್ನ ಕರಕಮಲ ಪೀಠದೊಳೆಸೆವ । ಸಡಗರದ ಇಷ್ಟಲಿಂಗದಿ ಬೆರದ ನೆಲೆಪ್ರಸಿದ್ಧ ಕೇಳೆಂದು ಜಕ್ಕಣಾರ್ಯಂ ॥ ... ॥೪೦॥

ಗುರುವೆ ಜಯ ಪರಬ್ರಹ್ಮ ವಿರವೆ ಜಯ ಸದಮಲಾ । ದರವೆ ಜಯ ಸತ್ಯದಾಗರವೆ ಜಯ ಸತಕಲ್ಪ । ತರುವೆ ಜಯ ಜಯ ತರುಣಿಶಶಿ ಕೋಟಿನಿಭ ಗಾತ್ರರುಚಿಯೆ ಜಯ ಭಕ್ತಜನರ ॥ ಪೊರವೆ ಜಯ ಭವಪಾಶಹರವೆ ಜಯ ಮುಕ್ತಿಫಲ ವರವೆ ಜಯ ವಭಯಕರ ಮೆರವೆ ಜಯ ಜಯ ಪರಾ । ತ್ಪರವೆ ಜಯ ಪರಮಳೆಯ ಮಲ್ಲೇಶ ಮದ್ಗುರುವೆ ಮನದಿಷ್ಟವಿತ್ತು ಸಲಹೈ ॥ ... *

ಹದಿನೆಂಟನೇ ಸಂಧಿ ಮುಗಿದುದು.

—(ಹತ್ತೊಂಭತ್ತನೆಯ ಸಂಧಿ ಪ್ರಾರಂಭವು.)—

ಸೂಚನೆ॥ ಆಶನ=ಅಗುಳು ॥೧॥ ಅಭಿಮತ=ಇಷ್ಟ ॥೨॥ ಅಗ್ರಜೆ=ಅಕ್ಕ, ಅಗಣಗಣಿತರು=ಅನಂತಸಂಖ್ಯರು ॥೩॥ ಕವಾಟ=ಕದ ॥೪॥ ಶೇಷ=ಮಿಕ್ಕದ್ದು ॥೫॥ ಉಸುರಲು=ಹೇಳಲು, ಅನಕ=ಆವರೆಗೂ ॥೬॥ ತವರಾಜ-ಸಕ್ಕರ ॥ ೭ ॥ ಹವಿ=ಹವಿರ್ಭಾಕ್ತಾದ ಅಗ್ನಿ, ಅನ್ನವರ=ಆವರೆಗೂ ॥೮॥ ಮರುಜೀವಣಿಗೆ=ಮೃತಸಂಜೀವನ ಮಣಿ, ಅಘ=ಪಾಪ ॥ ೯ ॥ ಪ್ರಸಾದ=ನೈವೇದ್ಯಶೇಷ, ಪರಿವಾದಿ=ಅನ್ಯದೇವತಾ ಪಾರಮ್ಯವನ್ನು ಹೇಳುವನು॥೧೦ ಪ್ರಸೂತಿ=ಹೆರಿಗೆ, ವಾರಿಧಿ=ಕಡಲು, ಮಾತಲ=ಸೋದರಮಾವ ॥೧೧॥ ಉಪದೇಶ=ಪ್ರತ್ಯಕ್ಷವಾಗುವಂತೆ ಮಂತ್ರಚೈತನ್ಯವಂ ಕೊಡುವಿಕೆ ॥೧೨॥ ಪರಿಶಂಕೆ=ಆಕ್ಷೇಪ ಸಂದೇಹ, ಪಿಪೀಲಿಕ=ಇರುವೆ ॥ ... ೧೩॥

—(ಕಥಾಸಂಗ್ರಹ ವಚನವು.)—

ಕಲ್ಯಾಣಪುರದಲ್ಲಿ ಬಸವೇಶನ ಅಕ್ಕಳಾದ ನಾಗಲಾಂಬಿಕೆ ಯೆಂಬ ಭಕ್ತಳು ಶಿವನೇ ಗಂಡನೆಂದು ಮಹಾಮಹಿಮೆಯಂ ತೋರಿಸಿದ್ದಳು. ಒಂದುದಿನ ಬಸವೇಶನು ಬಿಜ್ಜಳನ ಓಲಗಕ್ಕೆ ಪೋಗುತ್ತಿರೆ ಕಕ್ಕಯ್ಯನೆಂಬ ಭಕ್ತನು ತನ್ನ ಮನೆ

